₹ 5/-

# ನೇಸರು

## ಮೈಸೂರು ಅಸೋಸಿಯೇಷನ್ ಮುಂಬೈ

Nesaru Tingalole Vol XXXIII - 11 November 2015

PAGES 16





## ಬೆಳಕಿನ ಹಬ್ಬ ದೀಪಾವಳಿ

**The Mysore Association, Bombay**
393, Bhau Daji Road, Matunga, Mumbai - 400 019.
Tel.: 2402 4647, 2403 7065 • Fax : 2401 0574
Email : mysoreassociation.mumbai@gmail.com

# ಮೈಸೂರು ಅಸೋಸಿಯೇಷನ್‌ನಲ್ಲಿ ರಾಜ್ಯೋತ್ಸವ ದಿನಾಚರಣೆ



60ನೇ ಕರ್ನಾಟಕ ರಾಜ್ಯೋತ್ಸವವನ್ನು ಮೈಸೂರು ಅಸೋಸಿಯೇಷನ್ ಮುಂಬೈ ದಿನಾಂಕ 01.11.2015 ರಂದು ಸರಳವಾಗಿ ಹಾಗೂ ವಿಶಿಷ್ಠವಾಗಿ ಆಚರಿಸಿತು. ಪ್ರಾರಂಭದಲ್ಲಿ ಮೈಸೂರು ಅಸೋಸಿಯೇಷನ್‌ನ ಸದಸ್ಯೆ ಶ್ರೀಮತಿ ಲಕ್ಷ್ಮೀ



ಸೀತಾರಾಂ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ತದನಂತರ ಸಂಘದ ಅಧ್ಯಕ್ಷರಾದ ಕೆ. ಕಮಲಾ ಅವರು ಕನ್ನಡ ರಾಜ್ಯೋತ್ಸವ ಆಚರಣೆ ಮಹತ್ವವನ್ನು ವಿವರಿಸಿದರು. ಮುಂದೂ ಸಹ ನಮ್ಮ ಅಸೋಸಿಯೇಷನ್‌ನಲ್ಲಿ ಕನ್ನಡ ರಾಜ್ಯೋತ್ಸವವನ್ನು ಇನ್ನೂ ಸಂಭ್ರಮದಿಂದ ಆಚರಿಸೋಣ ಎನ್ನುವ ಅಭಿಲಾಷೆಯನ್ನು ವ್ಯಕ್ತಪಡಿಸಿದರು. ಸಂಜೆ ಗಂಟೆ 5.00ಕ್ಕೆ ಕನ್ನಡ ಗೀತೆಗಳ ರಸಮಂಜರಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಆನಂತರ 'MR. & MRS. ರಾಮಾಚಾರಿ' ಎನ್ನುವ ಕನ್ನಡದ ಹೊಸ ಚಲನಚಿತ್ರವನ್ನು



ಪ್ರದರ್ಶಿಸಲಾಯಿತು. ಚಲನಚಿತ್ರದ ನಂತರ ಎಲ್ಲರಿಗೂ ಪ್ರೀತಿ ಭೋಜನದ ವ್ಯವಸ್ಥೆಯನ್ನು ಮಾಡಲಾಗಿತ್ತು.



ಸಮಸ್ತ ಕನ್ನಡ ಮನಸ್ಸುಗಳಿಗೆ
ದೀಪಗಳ ಹಬ್ಬ ದೀಪಾವಳಿಯ
ಹಾರ್ದಿಕ ಶುಭಾಶಯಗಳು

ಮೈಸೂರು ಅಸೋಸಿಯೇಶನ್

ಗೌ. ಸಂಪಾದಕರು :

**ಡಾ. ಜ್ಯೋತಿ ಸತೀಶ್**

❖ ❖❖

ಸಂಪಾದಕ ಮಂಡಳಿ:

**ಡಾ. ಮಂಜುನಾಥ್**

**ಕೆ. ಮಂಜುನಾಥಯ್ಯ**

**ನಾರಾಯಣ ನವಿಲೇಕರ್**

**ಗಣಪತಿ ಶಂಕರಲಿಂಗ**

**ನೀಲಕಂಠ ಮೇಡರ್**

❖ ❖❖

ಬೆಂಗಳೂರು ಪ್ರತಿನಿಧಿ :

**ಎಂ.ಎ.ಎಸ್. ಪ್ರಸಾದ್**

❖ ❖❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. *- ಸಂ*

The views expressed by the contributors in this journal are theirs and not of the Association and the Association is not in anyway responsible for the same.

*- Ed.*

❖ ❖❖

ಸಂಪರ್ಕ ವಿಳಾಸ :

**ನೇಸರು**

ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ,
ಮುಂಬಯಿ-400 019.
✆ 24024647 / 2403 7065
Fax : 2401 0574
Email :
mysoreassociation.mumbai@gmail.com
Website :
www.mysoreassociation.in

*ಸಂಪಾದಕೀಯ*

# ನೇಸರು

## ತಿಂಗಳೋಲೆ

**ಸಂಪುಟ 33** **ನವೆಂಬರ್ 2015** **ಸಂಚಿಕೆ 11**

# ಬಾಲ್ಯಕ್ಕೆ ಹೋಗಿ ಬರೋಣವೇ?

ಹಬ್ಬ ಹರಿದಿನಗಳು ಬಂದಾಗ ಬೇಡ ಬೇಡವೆಂದರೂ ಮನಸ್ಸು ಬಾಲ್ಯದ ನೆನಪುಗಳನ್ನು ನೆನಪು ಮೆಲುಕು ಹಾಕತೊಡಗುತ್ತದೆ. ಜೀವನದಲ್ಲಿ ಮೆರೆಯಲಾಗದ ಕಾಲ ಯಾವುದು ಅಂತ ಯಾರಲ್ಲೇ ಕೇಳಿದರೂ ಎಲ್ಲರ ಉತ್ತರ ಒಂದೇ ಆಗಿರುತ್ತದೆ ಅದೇ ಬಾಲ್ಯ ಜೀವನ. ಕಾಲಚಕ್ರದಲ್ಲಿ ಮನುಷ್ಯ ಒಂದು ಯಂತ್ರದಂತೆ ಕಾರ್ಯನಿರ್ವಹಿಸುತ್ತಾ ಹೋಗುತ್ತಾನೆ. ಆದರೂ ಅವನ ಮನಸ್ಸಿನ ಒಂದು ಮೂಲೆಯಲ್ಲಿ ಏನನ್ನೋ ಕಳೆದುಕೊಂಡಂತೆ, ಯಾವುದೋ ಒಂದು ನೆನಪು ಮನಸ್ಸಿನಲ್ಲಿ ಒಂದು ಕೋಣೆಯಲ್ಲಿ ಹಚ್ಚ ಹಸಿರಾಗಿ ಉಳಿದಿರುತ್ತದೆ. ಅದುವೇ ನಮ್ಮೆಲ್ಲರ ಬಾಲ್ಯದ ಜೀವನ. ಯಾವುದರ ಚಿಂತೆಯೂ ಇಲ್ಲದೆ, ಮುಗ್ಧತೆಯನ್ನು ಮೆರೆಯುತ್ತಾ, ಸ್ವಚ್ಛಂದದ ಬಾಲ್ಯ ಜೀವನ ಎಷ್ಟು ಚಂದ. ಆ ನೆನಪುಗಳು ಅಮರ..ಮಧುರ ಭಾವನೆಗಳು. ಆದರೆ ಇಂದು ಅವೆಲ್ಲವೂ ಕೇವಲ ನೆನಪು. ಮನದುಲ್ಲುಳಿಯುವ ಅಚ್ಚಳಿಯದ ನೆನಪು.

ಆಟವಾಡುವಾಗ ಎಡವಿ ಬಿದ್ದಾಗ ಉಂಟಾದ ಗಾಯ...ಮಾಸದ ಆ ಕಲೆ.. ಅದನ್ನು ನೋಡಿದಾಗಲೆಲ್ಲ ನಮ್ಮ ಕಣ್ಣೆದುರಿಗೆ ಆ ಬಾಲ್ಯದ ದಿನದ ಪ್ರತಿಯೊಂದು ಕ್ಷಣವೂ ನಮ್ಮ ಮುಂದೆ ಹಾದುಹೋಗುತ್ತದೆ. ಬಾಲ್ಯ ಅಂದಾಕ್ಷಣ ನಮಗೇ ಅರಿವಿಲ್ಲದಂತೆ ನಮ್ಮ ಮುಖದಲ್ಲಿ ನವಿರಾದ ಮುಗುಳುನಗೆ ಹೊರಹೊಮ್ಮುವುದನ್ನು ನೀವೆಲ್ಲರೂ ಗಮನಿಸಬಹುದು. ಆ ದಿನಗಳಲ್ಲಿ ನಾವು ಆಡುತ್ತಿದ್ದ ಆಟಗಳು ಇವತ್ತಿನ ಮಕ್ಕಳಿಗೆ ಅದರ ಅಭಾಸವೇ ಇಲ್ಲ. ಕಂಪ್ಯೂಟರ್ ನಲ್ಲಿ ಆಡುವ ಆಟ, ಕ್ರಿಕೆಟ್ ಬಿಟ್ಟರೆ ಅವರಿಗೆ ಇವು ಯಾವುದರ ಪರಿವೇ ಇಲ್ಲ. 'ಕಸದಿಂದ ರಸ' ಎನ್ನುವ ಮಾತಿನಂತೆ ಕಸವೆಂದು ಬೇಡವೆಂದು ಬಿಸಾಕಿದ ಕಸದಿಂದಲೇ ನಮ್ಮ ಆಟದ ಆಟಿಕೆಗಳು ತಯಾರಾಗುತ್ತಿದ್ದವು. ಬಿಸಾಕಿದ ಜರಿ, ಕಾಗದಗಳನ್ನು ಒಟ್ಟು ಮಾಡಿ ರಗೋಲಿ ಆಡಲಿಕ್ಕೆ ಚಂಡನ್ನು ತಯಾರಿಸುತ್ತಿದ್ದೆವು. ಕಾಗದದ ಚೂರುಗಳಲ್ಲಿ ಕಳ್ಳ ಪೋಲಿಸ್ ಅಂತ ಬರೆದು, ಕಳ್ಳ ಪೋಲಿಸ್ ಆಟಗಳನ್ನು ಆಡುತ್ತಿದ್ದವು. ಮನೆಯ ಹೆಂಗಸರ ಒಡೆದು ಹೋದ ಬಣ್ಣ ಬಣ್ಣದ ಬಳೆಗಳನ್ನು ಒಟ್ಟು ಮಾಡಿ ಕಲರ್ ಕಲರ್ ವಾಟ್ ಕಲರ್' ಅಂತ ಆಡುತ್ತಿದ್ದ ಆಟವನ್ನು ಮರೆಯಲು ಸಾಧ್ಯವೇ. ಕಣ್ಣಾ ಮುಚ್ಚಾಲೆ, ಮದುವೆ ಆಟ, ಗೊಂಬೆ ಆಟ, ಬೆಂಕಿ ಪೊಟ್ಟಣದಲ್ಲಿ ಮನೆ ಕಟ್ಟುವುದು, ಜಿಲೇಬಿ ಇವೆಲ್ಲವೂ ಮರೆಯಲಾಗದ ನೆನಪು. ಜಿಲೇಬಿ ಆಟದಲ್ಲಿ ಆ ಎರಡು ಗೆರೆಯ ಮಧ್ಯೆ ಕಟ್ಟಿಕೊಳ್ಳುತ್ತಿದ್ದ 'ನಮ್ಮ ಮನೆ'ಯಲ್ಲಿ ಅದೆಷ್ಟು ಆತ್ಮೀಯತೆ ಇತ್ತು. ಮಳೆಗಾಲದಲ್ಲಿ ಗದ್ದೆಯ ಏರುಗಡದಲ್ಲಿ ನೆಲೆನಿಂತ ನೀರಿನಲ್ಲಿ ಮೀನನ್ನು ಹಿಡಿಯಲು ಒಂದು ಕೋಲಿನ ತುದಿಗೆ ಸರಿಗೆ ಕಟ್ಟಿ ಎರಹುಳು, ನೆಕ್ಕುಳನ್ನು ಅದರಲ್ಲಿ ಕಟ್ಟಿ ಮೀನನ್ನು ಹಿಡಿಯುವಾಗ ಆಗುತ್ತಿದ್ದ ಆ ಖುಷಿ! ಆ ಹಿಡಿದ ಮೀನನ್ನು ಒಂದು ಬಾಟಲ್ ಅಲ್ಲಿ ಸ್ವಲ್ಪ ನೀರು ಹಾಕಿ ಮುಚ್ಚಿಡುವುದು. ಸ್ವಲ್ಪ ಮೀನನ್ನು ಮನೆಯ ಬಾವಿಗೆ ತಂದು ಹಾಕಿ ಅದನ್ನು ದಿನಾಲೂ ಇಣಕಿ ನೋಡುವುದು ಎಷ್ಟು ದೊಡ್ಡದಾಗಿದೆ ಅಂತ ನೋಡುವುದು. ಮರದ ನಡುವೆ ಜೋಕಾಲಿಯನ್ನು ಕಟ್ಟಿ ಆಡುವಾಗ, ಬಳ್ಳಿ ತುಂಡಾಗಬಹುದೆಂಬ ಹೆದರಿ ಅಮ್ಮಂದಿರು ಕಸಿದುಕೊಂಡು ಹೋಗುವುದು, ಪಕ್ಕದ ಮನೆಯವರ ಮಾವಿನಮರ ಮತ್ತು ಹುಣಸೆ ಮರ ಹತ್ತಿ ಹುಣಸೆ ಹಣ್ಣು ಕೊಯ್ಯುವಾಗ ಸಿಕ್ಕಿಬಿದ್ದು ಮನೆಯವರಿಂದ ಆದ ಬೈಗುಳ, ಹೊಡೆತದಲ್ಲೂ ಒಂದು ರೀತಿಯ ಖುಷಿ. ಅಮ್ಮಂದಿರು ಹೊಲಕ್ಕೆ ಹೋಗುವಾಗ ಅವರ ಹಿಂದೆ ಹೋಟೇಲ್ ನಲ್ಲಿ ತಿಂಡಿ ತಿನ್ನುವ ಆಸೆಯಿಂದ ಹೊಲಕ್ಕೆ ಕಟ್ಟಿಗೆ ತರಲು ಹೋಗುವುದು. ಶಾಲೆಗೆ ರಜಾದಿನಗಳು ಬಂದಾಗ, ಅಮ್ಮಂದಿರ ಜೊತೆ ಹೊಲಕ್ಕೆ ಹೋಗುವಾಗ ಇದ್ದ ಖುಷಿ, ಬರುವಾಗ ಆ ಕಟ್ಟಿಗೆಯ ಬಾರಕ್ಕೆ ನಾಳೆಯಿಂದ ಹೊಲಕ್ಕೆ ಬರುವುದಿಲ್ಲ ಎಂದು ಹೇಳುವುದು. ಮರುದಿನ ಹೋಟೆಲ್ ನ ತಿಂಡಿಯ ಆಸೆಗೆ ಮತ್ತೆ ಅಮ್ಮಂದಿರ ಹಿಂದೆ ಎದ್ದು ಓಡುವುದು... ಇವೆಲ್ಲವೂ ಬಾಲ್ಯದ ಸುಮಧುರ ನೆನಪುಗಳು. ಬಾಲ್ಯದ ನಮ್ಮ ಜೀವನದ ಸೀಮಿತ ಚೌಕಟ್ಟಿನಲ್ಲಿದ್ದರೂ ಮನಸ್ಸಿನಲ್ಲಿ ಒಂದು ರೀತಿಯ ನೆಮ್ಮದಿಯಿತ್ತು. ಯಾವುದೇ ಚಿಂತೆಗಳ ಹಾವಳಿಗಳಿರಲಿಲ್ಲ. ದ್ವೇಷ, ಹೊಟ್ಟೆಕಿಚ್ಚಿನಂತ ಭಾವನೆಗಳಿರಲಿಲ್ಲ. ಇವತ್ತಿನ ಮಕ್ಕಳಿಗೆ ಆ ರೀತಿಯ ಕಷ್ಟವಿಲ್ಲ. ತಂದೆ ತಾಯಿಗಳು ಅವರು ಆಸೆಪಟ್ಟಿದ್ದನ್ನೆಲ ಕ್ಷಣ ಮಾತ್ರದಲ್ಲಿ ತಂದುಕೊಡುತ್ತಾರೆ. ಹಾಗಾಗಿ ಇವತ್ತಿನ ಮಕ್ಕಳಿಗೆ ಕಷ್ಟದ ಅರಿವೇ ಇಲ್ಲ. ನಮ್ಮ ಬಾಲ್ಯದಲ್ಲಿ ಒಂದು ಆಸೆಯ ಪೂರೈಕೆಗಾಗಿ ಎಷ್ಟು ಕಷ್ಟಪಡುತ್ತಿದ್ದೆವು. ನಾವು ಎಷ್ಟೇ ಹಠ ಮಾಡಿದರೂ ಸಿಗುತ್ತಿದ್ದದ್ದು ಹೊಡೆತ ಹೊರತು ನಮ್ಮ ಇಚ್ಛೆಯಲ್ಲ. ಹಾಗಾಗಿ ಪ್ರತಿ ಚಿಕ್ಕ ಆಸೆಯ ಪೂರೈಕೆಯಲ್ಲಿ ಒಂದು ರಾಜ್ಯವನ್ನೇ ಗೆದ್ದಷ್ಟು ಖುಷಿ.

ಹಬ್ಬ ಬಂತೆಂದರೆ ಹೊಸ ಬಟ್ಟೆ ಸಿಗುತ್ತದೆ ಎನ್ನುವ ಖುಷಿ. ವರ್ಷಕ್ಕೆ ಒಂದೇ ಜೊತೆ ಹೊಸ ಬಟ್ಟೆ. ಒಂದು ಹಬ್ಬ ಮುಗಿತೆಂದರೆ ಆ ಬಟ್ಟೆ ಕಬ್ಬಿಣದ ಪೆಟ್ಟಿಗೆ ಸೇರುತ್ತದೆ. ಇನ್ನು ಅದು ಹೊರಬರುವುದು ಇನ್ನೊಂದು ಹಬ್ಬ ಬಂದಾಗಲೇ. ಆಗ ಮಕ್ಕಳಿಗೆ ಬಟ್ಟೆಗಳನ್ನು ಹೇಗೆ ತೆಗೆಯುತ್ತಿದ್ದರೆ ಮುಂದಿನ ಮೂರು ನಾಲ್ಕು ವರ್ಷ ಆ ಬಟ್ಟೆಯನ್ನು ಹಾಕಲು ಬರುವಂತಿರಬೇಕು. ನಮಗಿಂತ ಉದ್ದದ ಬಟ್ಟೆ. ಅದು ಹೇಗೆ ಇರಲಿ. ಹೊಸದು ಎನ್ನುವ ಭಾವನೆಯಿಂದ ಯಾವುದೇ ದೂರನ್ನು ಮಾಡದೇ ಅದನ್ನು ಸಂತಸದಿಂದಲೇ ಹಾಕಿಕೊಳ್ಳುತ್ತಿದ್ದೆವು. ದೀಪಾವಳಿ ಹಬ್ಬ ಬಂದಾಗ ಬೆಳಿಗ್ಗೆ ಬೆಳಿಗ್ಗೆ ಎಣ್ಣೆ ಸ್ನಾನ ಮಾಡುವುದು, ಹೊಸ ಬಟ್ಟೆ ಹಾಕಿಕೊಳ್ಳುವುದು, ಸಿಹಿ ಮತ್ತು ಸಪ್ಪೆ ಕಡುಬನ್ನು ತಿನ್ನುವುದು ಮತ್ತು ಪಟಾಕಿ ಹೊಡೆಯುವುದು. ದೊಡ್ಡ ದೊಡ್ಡ ಪಟಾಕಿ ತಂದು ಹೊಡೆಯಲು ನಮ್ಮ ಹತ್ತಿರ ಆಗ ಹಣ ಇರುತ್ತಿರಲಿಲ್ಲ. ಕೇಪ್ ಪಟಾಕಿ, ಸರ ಪಟಾಕಿ, ನಕ್ಷತ್ರ ಕಡ್ಡಿ, ನೆಲಚಕ್ರ, ಬ್ರಿಷ್. ನಾವು ತಂದ ಪಟಾಕಿ ಮುಗಿದ ಮೇಲೆ ಪಕ್ಕದ ಮನೆಯವರು ಬಿಡುವ ದೊಡ್ಡ ದೊಡ್ಡ ಪಟಾಕಿ, ಬಾಣಗಳನ್ನು ನೋಡುವುದೇ ಒಂದು ಆನಂದ. ನೋಡಿದಷ್ಟೂ ಸಾಲದು. ಆ ದಿನ ರಾತ್ರಿ ಹೊಡೆಸಿದ ಪಟಾಕಿಗಳಲ್ಲಿ ಯಾವುದಾದರೂ ಪಟಾಕಿ ಹಾಗೆಯೇ ಉಳಿದಿರಬಹುದೆಂಬ ಆಸೆಯಿಂದ ಮರುದಿನ ಬೆಳಿಗ್ಗೆ ಬೆಳಿಗ್ಗೆ ಅದನ್ನು ಹುಡುಕಿ ತೆಗೆದರೆ ಒಂದು ದೊಡ್ಡ ಸಾಧನೆ ಮಾಡಿದ ಖುಷಿ. ಬಾಲ್ಯದ ಈ ಸವಿನೆನಪನ್ನು ಓದಿದ ನೀವೆಲ್ಲರೂ ಖಂಡಿತವಾಗಿಯೂ ಒಮ್ಮೆ ಬಾಲ್ಯಕ್ಕೆ ಹೋಗಿ ಬರುತ್ತಿರಾ... ನಿಜ ತಾನೇ? ಅಂತಹ ಬಾಲ್ಯವನ್ನು ಮತ್ತೆ ಪಡೆಯಲಿಕ್ಕೆ ಸಾಧ್ಯವಿಲ್ಲ. ಬಾಲ್ಯವನ್ನು ನೆನೆಸಿಕೊಂಡಾಗಲೆಲ್ಲ ನಾವು ದೊಡ್ಡರಾಗದೇ ಹಾಗೆ ಇರಬೇಕಿತ್ತು ಅಂತ ಮನಸು ಬಯಸುತ್ತದೆ. ಬಾಲ್ಯದ ನೆನಪುಗಳನ್ನು ಮತ್ತೆ ಮೆಲುಕುವ ಹಾಕುವ ಮೂಲಕ ಬಾಲ್ಯಕ್ಕೆ ಹೋಗಿ ಬರಬಹುದಲ್ಲವೇ?

**– ಡಾ. ಜ್ಯೋತಿ ಸತೀಶ್**

# ಡಾ. ಜಿ.ಡಿ. ಜೋಶಿಯವರ ಚೊಚ್ಚಲ ಕವನ ಸಂಕಲನ



✍ ಡಾ. ಕರುಣಾಕರ್ ಎಮ್. ಶೆಟ್ಟಿ

ಪ್ರಬಂಧ, ಕವಿ ಕಾವ್ಯ ಪರಿಚಯ, ಪಿ.ಎಚ್.ಡಿ. ಮಹಾಪ್ರಬಂಧ, ಅಂಕಣ ಲೇಖನ, ಅನುವಾದ, ಸಂಪಾದಿತ ಕೃತಿಗಳೆಂದು ಈಗಾಗಲೇ 36 ಕೃತಿಗಳನ್ನು ರಚಿಸಿ ಮಹಾರಾಷ್ಟ್ರದಲ್ಲಿ, ಕರ್ನಾಟಕದಲ್ಲಿ ಚಿರಪರಿಚಿತರಾಗಿರುವ ನನ್ನ ವಿದ್ಯಾಗುರು ಡಾ. ಜೋಶಿಯವರ ಮೂವತ್ತೇಳನೆಯ ಕೃತಿ, ಅದೇ ರೀತಿ ಚೊಚ್ಚಲ ಕವನ ಸಂಕಲನ 'ಮನದ ಮಿಡಿತ' ಈ ಕೃತಿಯ ಮೂಲಕ ಅವರು ಕಾವ್ಯ ಲೋಕಕ್ಕೂ ಅಧಿಕೃತ ಪ್ರವೇಶವನ್ನು ಮಾಡಿದ್ದಾರೆ.

ಡಾ. ಜೋಶಿಯವರು ಒಂದು ವಿಶಾಲವಾಗಿ ಹಬ್ಬಿರುವ ಆಲದ ಮರದಂತೆ. ಆಲದ ಮರ ತನ್ನ ಆಶ್ರಯಕ್ಕೆ ಬರುವ ಎಲ್ಲ ಜೀವಿಗಳಿಗೆ ನೆರಳು ನೀಡುವಂತೆ, ಪಕ್ಷಿಗಳಿಗೆ ಫಲಪುಷ್ಪ ನೀಡುವಂತೆ ಇವರೂ ತನ್ನ ಸಂಪರ್ಕಕ್ಕೆ ಬಂದ ಎಲ್ಲರಿಗೂ ದಾರಿದೀಪವಾಗುತ್ತಾರೆ. ಬೇರೆಯವರ ಮಾತೇಕೆ? ಅವರ ಸಂಪರ್ಕಕ್ಕೆ ಬಂದ ದೆಸೆಯಿಂದಲೇ ನಾನು ಎಂ.ಎ, ಎಂ.ಫಿಲ್, ಪಿಎಚ್‌ಡಿ ಪದವಿ ಪಡೆಯುವಂತಾಯಿತಲ್ಲದೆ, ಸಾಹಿತ್ಯ ಕ್ಷೇತ್ರವೆಂಬ ಸಿಂಧುವಿನಲ್ಲಿ ಒಂದು ಬಿಂದು ಎನಿಸುವಂತಾಯಿತು.

ಡಾ. ಜೋಶಿಯವರು ಆಗಾಗ ಕವಿತೆ ರಚಿಸುತ್ತಿದ್ದುದನ್ನು ನಾನು ಬಲ್ಲೆ. ಅದು ಆಗಾಗ ಅಲ್ಲಲ್ಲಿ ನಿಯತಕಾಲಿಕೆಗಳಲ್ಲಿ ಬೆಳಕೂ ಕಾಣುತ್ತಿದ್ದರೂ ಈಗ ಕೃತಿ ರೂಪದಲ್ಲಿ ಅದು ಸಹೃದಯರ ಕೈ ಸೇರುತ್ತಿದೆ. ಈ ಕೃತಿಗಾಗಿ ಡಾ. ಜೋಶಿಯವರನ್ನು, ಪ್ರಕಟಿಸಿರುವ ಶ್ರೀರಾಮ್ ಬುಕಂ ಸೆಂಟರ್ ಮಂಡ್ಯ ಅವರನ್ನು ನಾನು ಮೊತ್ತ ಮೊದಲಾಗಿ ಹೃದಯಾಂತರಾಳದಿಂದ ಅಭಿನಂದಿಸುತ್ತಿದ್ದೇನೆ. ಈ ಕೃತಿಯನ್ನು ಅವರು ತಮ್ಮ ಧರ್ಮಪತ್ನಿ ಶ್ರೀಮತಿ ರಜನಿಯವರಿಗೆ ಅರ್ಪಿಸಿದ್ದಾರೆ. ಜೋಶಿಯವರ ಸಾಹಿತ್ಯದ ಬದುಕಿನಲ್ಲಿ ಅವರ ಪತ್ನಿಯವರ ಯೋಗದಾನ ಬಹುದೊಡ್ಡದು. ಅವರ ಸಾಮರಸ್ಯದ ಬದುಕನ್ನು ಹತ್ತಿರದಿಂದ ನೋಡುವ ಸುಯೋಗ ನನ್ನ ಪಾಲಿಗೆ ಒದಗಿತ್ತು. ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಈ ಕವನ ಸಂಕಲನದ ಪ್ರಕಟಣೆಗೆ ಹಾಡುವ ಕವಿಗಳೂ ನನ್ನ ಆತ್ಮೀಯರಲ್ಲಿ ಓರ್ವರಾದ ಬಿ.ಎಸ್. ಕುರ್ಕಾಲ್ ಅವರು ತನ್ನ ಗೌರವ ಗ್ರಂಥ ನಿಧಿಯಿಂದ ಅಂಶಿಕ ನೆರವನ್ನೂ ನೀಡಿದ್ದಾರೆ. ಅವರ ಈ ಕನ್ನಡ ಕಟ್ಟುವ ಕಾರ್ಯಕ್ಕೆ ನಾನು ಅವರಿಗೂ ತಲೆಬಾಗುತ್ತಿದ್ದೇನೆ.

ಕೃತಿಗೆ ಒಪ್ಪುವ ರೀತಿಯಲ್ಲಿ ಕುರ್ಕಾಲರೆ ಮುನ್ನುಡಿಯನ್ನು ಬರೆದಿದ್ದಾರೆ. ಅಲ್ಲದೆ ಬೆನ್ನುಡಿಯನ್ನು ಡಾ. ಕೃಷ್ಣಕುಮಾರ್ ಬರೆದಿದ್ದಾರೆ. ಅವರಿಗೂ ಅಭಿವಂದನೆಗಳು.

ಲಲಿತ ಪ್ರಬಂಧಕಾರರಾಗಿಯೂ ಹೆಸರು ಪಡೆದಿರುವ ಡಾ. ಜೋಶಿಯವರದು ದಣಿವರಿಯದ ಸಾಹಿತ್ಯ ಪ್ರೇಮ. ಕನ್ನಡ ಪ್ರಚಾರ ಸಮಿತಿ, ಮನೆ ಮನೆಯಲ್ಲಿ ಸಾಹಿತ್ಯ, ಸ್ಪಂಧನ, ಪುಸ್ತಕ ಪ್ರಕಟಣೆ, ಈಗ ಅವರು ಸಾಹಿತ್ಯ ಲೋಕದಲ್ಲಿ ಪ್ರವೇಶ ಮಾಡಿರುವುದು ಅವರ ಅಭಿಮಾನಿಗಳಿಗೆ ಸಂತಸ ಕೊಡುವ ಸಂಗತಿಯಾಗಿದೆ.

ಈ ಕವನ ಸಂಕಲನದಲ್ಲಿ ಒಟ್ಟು 40 ಕವನಗಳಿವೆ. ಅದೇ ರೀತಿ ಸ್ವಲ್ಪಜ್ಞನ ವಚನಗಳು, ಚುಟುಕುಗಳೂ ಇವೆ. ಇಲ್ಲಿಯ ಕವನಗಳು ಸರಳವಾಗಿದ್ದು, ವಸ್ತು ವೈವಿಧ್ಯಗಳಿಂದ ಕೂಡಿದ್ದು ಓದುಗರ ಮನಸ್ಸನ್ನು ತಟ್ಟುತ್ತವೆ.

ಡಾ. ಜೋಶಿಯವರ ಪೂರ್ಣ ಹೆಸರು ಗುರುನಾಥ ಧುಂಡಭಟ್ಟ ಜೋಶಿ. ಕೃತಿಯ ತೆರೆಯೇಳುವುದು ಮೊದಲ ಕವನ ಗುರುನಾಥ ವಚನದ ಮೂಲಕ. ಈ ವಚನ ಅಕ್ಕಮಹಾದೇವಿಯ ವಚನ. ಬೆಟ್ಟದಲ್ಲೊಂದು ಮನೆಯ ಮಾಡಿ ವಚನವನ್ನು ನೆನಪಿಸುತ್ತದೆ.

'ದೋಣಿಯ ವಿಹಾರ ಮಾಡಬಯಸಿದವ
ತೊರೆ ನೀರಿಗೆ ಅಂಜಿದೊಡೆಂತಯ್ಯ'

ಕವನ ಹೀಗೆ ಮುಂದುವರಿಯುತ್ತದೆ.

ಸಂಕಲನದ ಎರಡನೆಯ ಕವನ 'ಆಸೆಗಿಲ್ಲ ಕೊನೆ ಮೊದಲು'. ಮಾನವನ ಆಸೆಗೆ ಕೊನೆ ಮೊದಲಿಲ್ಲ ಎನ್ನುವ ಸತ್ಯವನ್ನು ಈ ಕವನ ಸರಳವಾದ ರೀತಿಯಲ್ಲಿ ಪ್ರತಿಪಾದಿಸುತ್ತದೆ. ಈ ಸಾಲುಗಳನ್ನು ಗಮನಿಸಿ.

'ಕಂಚಾದರೆ ದೇಗುಲದ ಗಂಟೆಯಾದೇನು
ಹಾಲಾದರೆ ಶಿಶುವಿನ ಹಸಿವು ತಣಿಸೇನು'

ಅಂದರೆ ಮಾನವನ ಆಸೆಯ ಕೊಂಡಿ ಬೆಳೆಯುತ್ತಲೇ ಇರುತ್ತದೆಯೆನ್ನುವ ಭಾವ ಇಲ್ಲಿ ಪ್ರತಿಪಾದಿಸಲ್ಪಟ್ಟಿದೆ.

ಅಂದಿನ ಗುರುಶ್ರೇಷ್ಠರ ಸ್ಥಾನವನ್ನು ಇಂದು ಟಿವಿ ಆಕ್ರಮಿಸಿರುವ ಬಗ್ಗೆ ಕವಿ ಹೊಸಕಾಲದ ಗುರು ಕವಿತೆಯಲ್ಲಿ ವ್ಯಂಗ್ಯದ ರೂಪದಲ್ಲಿ ಕಟ್ಟಿಕೊಟ್ಟಿದ್ದಾರೆ. ಗುರು ತನ್ನ ಶಿಷ್ಯರನ್ನು ನೇರ ದಾರಿಯತ್ತ ನಡೆಸಿದರೆ, ಟಿವಿ ಹೆಚ್ಚಿನ ಸಲ ತಪ್ಪು ದಾರಿಯತ್ತ ಎನ್ನುವ ಸತ್ಯವನ್ನು ತೆರೆದಿಡುತ್ತಾರೆ. 'ಚಟವಾಗುತ್ತ ಹೋದರೆ' ಅದೇ ನಿಟ್ಟಿನಲ್ಲಿ ಸಾಗುವ ಕವನ. ಈ ಎರಡು ಕವನಗಳಲ್ಲೂ ಇಂದು ನಮಗೆ ಅನಿವಾರ್ಯವೆನಿಸಿರುವ ಟಿವಿ ಮಾಡುವ ಆವಾಂತರದ ಸಹಜ ಚಿತ್ರಣವಿದೆ.

'ಬೆಳಕಿನ ಮೆಲುಕು' ದೀಪಾವಳಿ ಹಬ್ಬ ಸಂತಸ ತರುವ ಹಬ್ಬವಾದರೂ ಅದನ್ನು ಆಚರಿಸಲು ಸಾಮಾನ್ಯ ಜನರು ಪಡುವ ಪರಿಸ್ಥಿತಿಯ ಚಿತ್ರಣವನ್ನು ನಮ್ಮ ಕಣ್ಣೆದುರು ತಂದು ನಿಲ್ಲಿಸುತ್ತದೆ.

ಡಾ. ಜೋಶಿಯವರ ಕವನಗಳು ಮಾನವ ಜೀವನದ ಕೆಲವು ಕಟು ಸತ್ಯಗಳನ್ನು ವ್ಯಂಗ್ಯದ ಮೂಲಕ ಕಟ್ಟಿಕೊಟ್ಟಿರುವುದನ್ನು ನಾವು ಕಾಣುತ್ತೇವೆ. 'ಧ್ಯಾನ' ಕವನದಲ್ಲಿ ಮಾನವ ಧ್ಯಾನ ಮಾಡುವುದರ ಹಿಂದೆ ಅಡಗಿರುವ ಅವನ ಸ್ವಾರ್ಥದ ಲೇವಡಿಯಿದೆ.

'ಬಯಸಿದ್ದು ಆದದ್ದು' ಕವನದಲ್ಲಿ ಮದುವೆಯಾಗಿ ಭ್ರಮನಿರಸನಗೊಂಡವರ ವ್ಯಥೆಯ ಕಥೆಯಿದೆ. ಕವನದ ಕೊನೆಯ ಎರಡು ಸಾಲುಗಳು ಕವಿತೆಯ ಪೂರ್ಣ ಚಿತ್ರಣವನ್ನು ಕೊಡುತ್ತದೆ. ಮದುವೆ ಅದೊಂದು ಜೂಜಿನಂತೆ ಎನ್ನುವ ಸತ್ಯ ಇಲ್ಲಿ ಅನಾವರಣಗೊಂಡಿದೆ.

'ಎಲ್ಲರಂತೆ ನಾನು ಮದುವೆಯಾದೆ ನಿಜ
ಆದರೆ ಬೆಳಕಿಲ್ಲದ ಬಾಳಿನಲ್ಲಿ ಕತ್ತಲೆಯ ಸಜಾ'

ಇಲ್ಲಿ ಬಂದಿರುವ ಬಹಳಷ್ಟು ಕವನಗಳು ಛಂದೋಬದ್ಧವಾಗಿದ್ದು ಗಮನ ಸೆಳೆಯುತ್ತವೆ.

'ಮಲ್ಲ ಮಲ್ಲಿ' ಕವನ ವಿನೋದದಿಂದ ಸಹೃದಯರ ಮನಸು ಮುದಗೊಳಿಸುತ್ತದೆ.

'ಹೆಸರಿನಲ್ಲೇನಿದೆ' ಕವನದಲ್ಲಿ ಹೆಸರು ಮತ್ತು ಹೆಸರು ಹೊತ್ತವರಿಗೆ ಇಲ್ಲದ ಸಂಬಂಧದ ಬಗ್ಗೆ ಲೇವಡಿ ಮಾಡಿದೆ.

'ವೀರೇಂದ್ರರು' ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರಿಗೆ ನುಡಿನಮನ ಸಲ್ಲಿಸುತ್ತದೆ.

'ಪ್ರೀತಿಸಿ ಮದುವೆ' ಇದೊಂದು ಪ್ರೇಮಕವನ. ಪ್ರೇಮ ಕವನಗಳು ವಿರಳವಾಗುತ್ತಿರುವ ಈ ಸಮಯದಲ್ಲಿ ಇಂತಹ ಕವನಗಳು ಮೈಮನಕ್ಕೆ ಕಚಗುಳಿಯಿಡುತ್ತವೆ. 'ನೀನಲ್ಲವೇ?' ಎಂಟು ವರುಷದ ಹಿಂದೆ ಇದೇ ನಿಟ್ಟಿನಲ್ಲಿ ಸಾಗುವ ಕವನಗಳು.

ಕವನ ಸಂಕಲನಕ್ಕೆ ಇಟ್ಟಿರುವ ಹೆಸರು 'ಮನದ ಮಿಡಿತ'. ಈ ಹೆಸರಿನ ಕವನವೂ ಸಂಕಲನದಲ್ಲಿದೆ. ಮಾನವನಾದವನು ದುರಾಸೆಯನ್ನು ದೂರವಿಟ್ಟು ಆಶಾವಾದಿಯಾಗಿ ಬದುಕು ಕಟ್ಟಬೇಕೆನ್ನುವ ಹಿತನುಡಿ ಈ ಕವಿತೆಯ ಸಾಲುಗಳಲ್ಲಿವೆ.

'ನೆನಪಿನ ಸುರುಳಿ' ಮಾನವ ತನ್ನ ಬದುಕಿನಲ್ಲಿ ನಿರಂತರ ಸಾಧನೆ ಮಾಡುತ್ತಲೇ ಇರಬೇಕೆಂದು ಕರೆ ನೀಡುತ್ತದೆ.

'ನಿಮ್ಮ ಮನೆ ಬೆಳಗಲು' ಕವನ ವೀಸೀ ಅವರ ಎಮ್ಮ ಮನೆಯಂಗಳದಿ ಬೆಳದೊಂದು ಹೂವನ್ನು ನೆನಪಿಗೆ ತರುತ್ತದೆ. ಹೆಣ್ಣು ಹೆತ್ತವರು ತಮ್ಮ ಕರುಳ ಕುಡಿಯನ್ನು ತಮ್ಮ ಮಗಳನ್ನು ತಮ್ಮ ಕರುಳ ಕುಡಿಯನ್ನು ಮದುವೆಯ ನಂತರ ಪತಿಗೃಹಕ್ಕೆ ಬೀಳ್ಕೊಡುವಾಗ ಹಿತವಚನದೊಂದಿಗೆ ಹಾಡುವ ಕವನ. ಮಗಳನ್ನು ಹೇಗೆ ನೋಡಿಕೊಳ್ಳಬೇಕೆಂದು ಅವಳ ಅತ್ತೆ ಮಾವನಲ್ಲೂ ತಾಯಿ ತಂದೆಯವರು ಇಲ್ಲಿ ತನ್ನ ಮನದಾಳದಲ್ಲಿ ಇರುವುದನ್ನು ಕೇಳಿಕೊಂಡಿದ್ದಾರೆ.

ಪ್ರಕೃತಿಯನ್ನು ಕುರಿತು ಕವನ ಕಟ್ಟದ ಕವಿಗಳೆ ಇರಲಾರರು. ಪ್ರಕೃತಿಗೂ ಕವಿಗೂ ಅವಿನಾಭಾವ ಸಂಬಂಧ. 'ಬಾರೋ ಮಳೆರಾಯ' ಮಳೆಯನ್ನು ಪ್ರಿತಿಯಿಂದ ಸ್ವಾಗತಿಸುವ ಕವನ. ದೇಶದ ಉದ್ಧಾರ ಅದು ಹಳ್ಳಿಗಳ ಉದ್ಧಾರದಿಂದಲೇ ಎನ್ನುವ ಸತ್ಯವನ್ನು ಸಾರುವ ಕವನ. 'ಮರಳಿ ಹಳ್ಳಿಗೆ ಹೋಗಿರಿ' ನಗರಕ್ಕೆ ಬಂದವರು ಇನ್ನಾದರೂ ತಿರುಗಿ ಹಳ್ಳಿಗೆ ಹೋಗಬೇಕೆನ್ನುವ ಭಾವ ಇಲ್ಲಿದೆ.

'ತಂದೆಯಂತೆ ಮಗ' ಮಕ್ಕಳು ದೊಡ್ಡವರ ನಡೆ ನುಡಿಯನ್ನು ಅನುಕರಿಸಿ ಬೆಳೆಯುತ್ತಾರೆ. ಅದಕ್ಕಾಗಿ ನಾವೂ ಸನ್ನಡತೆಯಲ್ಲಿ ಸಾಗಬೇಕೆಂದು ಸಾರುವ ಕವನ.

'ಗೃಹಲಕ್ಷ್ಮಿಗೆ' ಕವನ ಮನ ತುಂಬಿದೆ. ಮನದಲಿ ಮನೆಮಾಡಿರುವ ಮನದನ್ನೆಯ ಪ್ರೀತಿಗೆ ಮುಡಿಪಾಗಿಟ್ಟಿರುವ ಕವನ. ಸಂಕಲನದ ಉತ್ತಮ ಕವನಗಳಲ್ಲೊಂದು.

"ಬಾಳಿಗೆ ಅರ್ಥ ನೀಡಿ ಮೆರೆದೆ ಇಲ್ಲಿ
ಪತಿಗೆ ಪ್ರೇರಣೆ ನೀಡಿ ಸುವಿಚಾರಗಳ
ಹರಿಸಿ ಮನೆಯ ದೇಗುಲ ಮಾಡಿ
ಗೃಹಲಕ್ಷ್ಮಿಯಾದೆ".

ಜೋಶಿಯವರಿಗೆ ಸಾಹಿತ್ಯಕ ಪರಿಚಾರಿಕೆ ನೀಡುತ್ತಿರುವ ನೆಮ್ಮದಿ 'ಬಾಳ ತೋಟ' ಕವನದಲ್ಲಿ ಮೂಡಿ ಬಂದಿದೆ. ಓದಲೇಬೇಕಾದ ಕವನ.

ಸ್ವಲ್ಪಜ್ಞನ 46 ವಚನಗಳು ಸಂಕಲನದ ಕೊನೆಯಲ್ಲಿ ಬಂದಿದ್ದು, ಈ ವಚನಗಳ ಮೇಲೆ ಸರ್ವಜ್ಞನ ದಟ್ಟ ಪ್ರಭಾವವಿದೆ. ಅವುಗಳಲ್ಲಿ ನಾವು ಆಧುನಿಕತೆಯ ಛಾಯೆಯನ್ನು ಕಾಣುತ್ತೇವೆ.

"ಸಾಲವನು ಪಡೆದಾಗ ಜೇನುಹನಿ ಸವಿದಂತೆ
ಬ್ಯಾಂಕಿನವನು ನೋಟೀಸು ಕೊಟ್ಟಾಗ
ಅವರ ಗೂಂಡಾಗಳು ಬಂದು ಬೆದರಿಸಿದಾಗ
ಪಕ್ಕೆಯಲಿ ಉಸಿರು ಸಿಕ್ಕಂತೆ ಅಲ್ಪಜ್ಞ"

ಸರ್ವಜ್ಞನ ಸಾಲವನು ಕೊಂಬಾಗ ಹಾಲೋಗರುಡನಂತೆ ವಚನ ಇಲ್ಲಿ ನೆನಪಿಗೆ ಬಂದೇ ಬರುತ್ತದೆ.

ಸಂಕಲನಕ್ಕೆ ಚುಟುಕುಗಳ ಮೂಲಕ ತೆರೆಬೀಳುತ್ತದೆ. ಹೊಂದಾಣಿಕೆ ಚುಟುಕು ನೋಡಿ,

"ಇರಬೇಕು ಹೊಂದಾಣಿಕೆ ನಮ್ಮ ನಿಮ್ಮಲ್ಲಿ
ಇಲ್ಲವಾದರೆ ಬಾಳು ಸಾಗುವುದು ಹೇಗೆ
ಒಂದೆತ್ತು ಅತ್ತ ಒಂದೆತ್ತು ಇತ್ತ ಎಳೆದರೆ
ಬಂಡಿ ಹೋಗುವುದೇನು ಮುಂದೆ ಮುಂದೆ?"

ಹೀಗೆ ಈ ಕವನ ಸಂಕಲನ ಡಾ. ಜೋಶಿಯವರ ಬಹುದಿನದ ಕನಸಿನ ಕೂಸು. ಇಲ್ಲಿ ಕವನಗಳು, ವಚನಗಳು, ಚುಟುಕುಗಳು ಓದುಗರನ್ನು, ಸಹೃದಯರ ಮನಸ್ಸನ್ನು ಮುದಗೊಳಿಸುತ್ತದೆ. ಡಾ. ಜೋಶಿಯವರ ಜೀವನೋತ್ಸಾಹ ದಣಿವರಿಯದ ಅವರ ನಿರಂತರ ಸಾಹಿತ್ಯ ಸೇವೆ ಇತರರಿಗೆ ಮಾದರಿಯಾಗಿ ನಿಲ್ಲುತ್ತದೆ. ಈ ಇಳಿವಯಸ್ಸಿನಲ್ಲೂ ಸಾಹಿತ್ಯ ಕ್ಷೇತ್ರದಲ್ಲಿ ಅತ್ಯಂತ ವ್ಯಸ್ತರಾಗಿರುವ ಅವರಿಂದ ಇನ್ನಷ್ಟು ಮಗದಷ್ಟು ಸಾಹಿತ್ಯ ಸೇವೆ ಸಲ್ಲಲೆಂದು ಆಶಿಸುತ್ತೇನೆ.

# ಕರ್ನಾಟಕ ಸಂಗೀತ ಕ್ಷೇತ್ರದ ನಾಡ ಕಣ್ಮಣಿಗಳು

## ವಿದ್ವಾನ್ ಬೆಳಕವಾಡಿ ಶ್ರೀನಿವಾಸ ಅಯ್ಯಂಗಾರ್ (ವೀಣಾ ಮತ್ತು ಗೋಟುವಾದ್ಯ ವಿದ್ವಾಂಸರು

ಶಿವಗಂಗೆಯ ಹತ್ತಿರವಿದ್ದ ಶ್ರೀ ಗಿರಿಪುರದಲ್ಲಿ ಶ್ರೀನಿವಾಸ ರಂಗಾಚಾರ್ಯ ಮತ್ತು ಶ್ರೀಮತಿ ವೆಂಕಟಲಕ್ಷ್ಮಮ್ಮನವರ ಸುಪುತ್ರರಾಗಿ ದಿನಾಂಕ 03–03–1888 ರಂದು ಶ್ರೀನಿವಾಸ ಅಯ್ಯಂಗಾರ್ಯರ ಜನನವಾಯಿತು. ಶ್ರೀ ವೈಷ್ಣವ ಸಂಪ್ರದಾಯಸ್ಥರಾದ ಇವರಿಗೆ ಪ್ರಾರಂಭಕ್ಕೆ ಕುಪ್ಪುಸ್ವಾಮಿ ಎಂದು ನಾಮಕರಣವಾದರೂ ಮುಂದೆ ಪ್ರಚಲಿತವಾದ ಹೆಸರು ಶ್ರೀನಿವಾಸ ಅಯ್ಯಂಗಾರ್ ಎಂದು.



ತಂದೆಯವರ ನಿಧನಾ ನಂತರ ಚಿಕ್ಕಪ್ಪನವರಾದ ವರದ ದೇಶಿಕಾಚಾರ್ಯರಲ್ಲಿ ಆಶ್ರಯ ದೊರೆಯಿತು. ವರದ ದೇಶಿಕಾಚಾರ್ಯರಾದರೂ ಸಂಗೀತದ ಸಾಧಕರಾಗಿದ್ದುದೇ ಅಲ್ಲದೆ ವೇದಾಂತ, ತರ್ಕ, ಸಂಸ್ಕೃತ, ಜ್ಯೋತಿಷ್ಯ ಶಾಸ್ತ್ರ, ಸಾಹಿತ್ಯಗಳಲ್ಲಿ ಆಸಕ್ತರಾಗಿದ್ದುದೇ ಅಲ್ಲದೇ ಸ್ವತಃ ಆಯುರ್ವೇದ ವೈದ್ಯರೂ ಆಗಿದ್ದರು. ಪ್ರಥಮವಾಗಿ ಗಾಯನ ಶಿಕ್ಷಣವನ್ನು ಚಿಕ್ಕಪ್ಪನವರೇ ಪ್ರಾರಂಭಿಸಿದರು. ಶ್ರೀ ಗಿರಿಪುರದಲ್ಲಿಯೇ ವಾಸವಾಗಿದ್ದ ಇವರ ಸೋದರಮಾವ ಕುಪ್ಪುಸ್ವಾಮಿ ಎನ್ನುವವರು ಇವರ ಪಿಟೀಲು ವಾದನದ ಗುರುವಾದರು.

ಮೈಸೂರಿನಲ್ಲಿ ವೀಣೆ ಶೇಷಣ್ಣ, ಭಕ್ಷಿ ಸುಬ್ಬಣ್ಣ, ಬಿಡಾರಂ ಕೃಷ್ಣಪ್ಪ ಮುಂತಾದವರು ಇದ್ದಂತ ಕಾಲದಲ್ಲಿ ಇವರು ಭಕ್ಷಿ ಸುಬ್ಬಣ್ಣನವರಲ್ಲಿ ತಮ್ಮ ವಿದ್ಯೆಯನ್ನು ಮುಂದುವರಿಸಿದರು. ಗುರುಗಳ ಅನುಗ್ರಹದಿಂದ ಮಹಾರಾಜರ ಕೃಪಾಕಟಾಕ್ಷ ದೊರೆಯಿತು. ಆಸ್ಥಾನದಲ್ಲಿ ವಿದ್ವಾಂಸರ ಹುದ್ದೆ ದೊರೆಯಿತು. ರಾಜಾಶ್ರಯ ದೊರೆತ ನಂತರ ಇವರ ವಾಸ ಬೆಳಕವಾಡಿಯಿಂದ ಮೈಸೂರಿಗೆ ಸ್ಥಳಾಂತರಗೊಂಡಿತು. ಹಾಡುಗಾರಿಕೆ, ಪಿಟೀಲು ವಾದ್ಯಗಳಲ್ಲದೆ ಗೋಟುವಾದ್ಯ ನುಡಿಸುವುದರಲ್ಲಿಯೂ ಶ್ರೀಯುತರು ಅದ್ವಿತೀಯರು.

ಸಂಗೀತ ಸಾಧಕರಾದ ಇವರು ಉತ್ತಮ ನಟರೂ ಹೌದು. ತಮ್ಮದೇ ಆದ ಒಂದು ನಾಟಕ ತಂಡವನ್ನು ಪ್ರಾರಂಭಿಸಿ ಅವರಿಂದ ಹೆಚ್ಚಾಗಿ ಪೌರಾಣಿಕ ನಾಟಕಗಳನ್ನು ಆಡಿಸಿದ ಕೀರ್ತಿ ಇವರದು. ಅದರಲ್ಲೂ ಮುಖ್ಯ ಪಾತ್ರಧಾರಿಯಾಗಿ ನಾಟಕಕ್ಕೆ ಹೆಚ್ಚಿನ ಶೋಭೆ ತರುತ್ತಿದ್ದರು. ಹೀಗಾಗಿ ಅರಮನೆಯ ನಾಟಕ ಕಂಪೆನಿಯಲ್ಲಿ ಇವರಿಗೊಂದು ವಿಶಿಷ್ಟ ಸ್ಥಾನ ಲಭಿಸಿತು. ಅರ್ಜುನ, ರಾಮ ಹೀಗೆ ಪೌರಾಣಿಕ ಪಾತ್ರಗಳಿಗೆ ಜೀವಕಳೆ ತಂದು ಶ್ರೋತೃಗಳು ತಾವು ಆ ಜೀವಂತ ವ್ಯಕ್ತಿಗಳನ್ನೇ ಕಾಣುತ್ತಿದ್ದೇವೇನೋ ಎನ್ನುವ ಭ್ರಮೆ ಮೂಡಿ ಬರುವಂತೆ ಮಾಡುವ ನಟನಾ ಕೌಶಲ್ಯ ಇವರದಾಗಿದ್ದಿತು.

'ಶ್ರೀನಿವಾಸ' ಅಂಕಿತದಲ್ಲಿ ವಾಗ್ಗೇಯಕಾರರೂ ಆದ ಶ್ರೀಯುತರ ಲೇಖನಿಯಿಂದ ಅನೇಕ ಕೃತಿಗಳು ಹೊರಬಂದಿವೆ. 72 ಮೇಳ ಕರ್ತರಾಗಗಳಲ್ಲಿ ಕೃತಿ ರಚನೆ ಮಾಡಿದ ಮೊದಲಿಗರು ಶ್ರೀನಿವಾಸ ಅಯ್ಯಂಗಾರರು. ಇವರು 19.09.1936 ರಲ್ಲಿ ತಮ್ಮ ಮಧ್ಯ ವಯಸ್ಸಿನಲ್ಲಿ ಅಂದರೆ 48ನೇ ವಯಸ್ಸಿನಲ್ಲಿಯೇ ದೇವಲೋಕ ಸೇರಿದರು.

# ಠುಮರಿ, ಗಝಲ್ ಸಮ್ರಾಜ್ಞೆ 'ಬೇಗಮ್ ಅಖತರ್'

ಹಿಂದುಸ್ಥಾನೀ ಶಾಸ್ತ್ರೀಯ ಸಂಗೀತ ಹಾಗೂ ಉಪಶಾಸ್ತ್ರೀಯ ಸಂಗೀತ ಇಂದಿನವರೆಗೆ ಸಮೃದ್ಧವಾಗಿ ಬೆಳೆಯಲು ಹಾಗೂ ಪರದೇಶಗಳಲ್ಲಿಯೂ ಸಹ ಸುಪ್ರಸಿದ್ಧವಾಗಲು ಅನೇಕ ಸಂಗೀತಗಾರರು, ಕಲಾವಿದರು, ವಾಗ್ಗೇಕಾರರು (ರಚನಾಕಾರರು) ಕಾರಣರಾಗಿದ್ದಾರೆ. ಪಂ. ರವಿಶಂಕರ ಅವರು ತಮ್ಮ ಸಿತಾರದ ಪ್ರಭುತ್ವದಿಂದ ಹಿಂದುಸ್ಥಾನೀ ಶಾಸ್ತ್ರೀಯ ಸಂಗೀತವನ್ನು ಅಮೇರಿಕಾ ಇತ್ಯಾದಿ ರಾಷ್ಟ್ರಗಳಲ್ಲಿ ತಮ್ಮದೇ ಆದ ವೈಶಿಷ್ಟ್ಯತೆಗಳಿಂದ ಜನಮನಗಳಲ್ಲಿ ಹೆಚ್ಚಿನ ಸ್ಥಾನವನ್ನು ನಿರ್ಮಿಸಿ ಹೆಸರು ಗಳಿಸಿದರು. ಅವರಂತೆಯೇ ಉಸ್ತಾದ್ ಅಲೀ ಅಕಬರ್ ಖಾನ್‌ರು ತಮ್ಮ ಸರೋದ ವಾದನದಿಂದ ಅಮೇರಿಕಾ ಇತ್ಯಾದಿ ರಾಷ್ಟ್ರಗಳಲ್ಲಿ ಖ್ಯಾತಿ ಪಡೆದರು. ಇಂದಿನವರೆಗೂ ಅಮೇರಿಕಾ, ಕೆನಡಾ, ಸ್ವಿಝರ್‌ಲ್ಯಾಂಡ್ ರಾಷ್ಟ್ರಗಳಲ್ಲಿ ಅಲೀ ಅಕಬರ್ ಸ್ಕೂಲ್ ಆಫ್



ಮ್ಯೂಸಿಕ್ ಅಪ್ರತಿಮ ಹೆಸರು ಗಳಿಸಿದೆ. ಅಲ್ಲದೆ, ಅನೇಕ ಅಮೇರಿಕನ್ನರೂ ಸರೋಡ ಬಾರಿಸುವುದನ್ನು ಕಲಿಯುತ್ತಿದ್ದಾರೆ. ಅನೇಕ ಅಮೇರಿಕನ್ಸ್ ಸಿತಾರವನ್ನು ಹಿಂದುಸ್ಥಾನೀ ಶಾಸ್ತ್ರೀಯ ಸಂಗೀತದ ಪರಂಪರೆಯಲ್ಲಿ ಬಾರಿಸಲು ಪ್ರಯತ್ನಪಡುತ್ತಿದ್ದಾರೆ. ಅಲ್ಲದೆ, ಹಿಂದುಸ್ಥಾನೀ ಶಾಸ್ತ್ರೀಯ ಸಂಗೀತದ ಕಲಾಕಾರರಾಗಿ ನಮ್ಮ ದೇಶಗಳಲ್ಲಿ ಕಾರ್ಯಕ್ರಮಗಳನ್ನು ಕೊಡುತ್ತಿದ್ದಾರೆ. ಇದೆಲ್ಲ ನಮ್ಮ ಮಹಾನ್ ಕಲಾಕಾರರ ತ್ಯಾಗ, ತಪಸ್ಸು. ಜನಮನದ ಅಂತರಂಗವನ್ನು ಚೆನ್ನಾಗಿ ಅರಿತುಕೊಂಡು ಅವರಲ್ಲಿ ಹಿಂದುಸ್ಥಾನೀ ಸಂಗೀತದ ಬೀಜವನ್ನು ಬಿತ್ತುವ ಮಹಾ ಚೇತನ ಶಕ್ತಿಯೇ ಕಾರಣ. ಅವರ ರೆಕಾರ್ಡ್‌ಗಳನ್ನು ಕೇಳಿದರೆ ಇಂದಿಗೂ ಕೇಳುವ ರಸಿಕರ ಮನದಲ್ಲಿ ನವ ಚೈತನ್ಯ ನಿರ್ಮಾಣವಾಗುವದು.

ಅದರಂತೆಯೇ ಹಿಂದುಸ್ಥಾನೀ ಉಪ ಶಾಸ್ತ್ರೀಯ ಸಂಗೀತವಾದ ಠುಮರಿ, ದಾದರಾ, ಚೈತಿ ಕಜರಿ, ಹೋರಿ, ಟಪ್ಪಾ ಇತ್ಯಾದಿಗಳು ಜನಮನಾಸದಲ್ಲಿ (ಜನತೆಯಲ್ಲಿ) ಬಿಂಬಿಸಿ ಅದನ್ನು ಬೆಳೆಸಲು ಪ್ರಯತ್ನಪಟ್ಟವರು ಬೇಗಮ್ ಅಖತರ್. ಹೆಸರಾಂತ ಠುಮರಿ ಗಝಲ್ ಗಾಯನ ಸಾಮ್ರಾಜ್ಞಿ, ಬೇಗಮ್ ಅವರು ಉಪಶಾಸ್ತ್ರೀಯ ಸಂಗೀತಕ್ಕೆ ಹೊಸದಾದ ಸ್ಥಾನಮಾನಗಳನ್ನು ನಿರ್ಮಿಸಿದರು. ಆಗಿನ ಕಾಲದಲ್ಲಿ ಸ್ತ್ರೀಯರು ಸಂಗೀತ ಹಾಡುತ್ತಿದ್ದರೆ ಅವರನ್ನು ಕೆಳಗಿನ ದರ್ಜೆಯ (ಜಾತಿಯ) ಸ್ತ್ರೀ ಅಂತ ಅನ್ನುತ್ತಿದ್ದರು. ಅವರು ಓಣಿಗಳಲ್ಲಿ ಬಂದರೆ ಸ್ತ್ರೀಯರು ಬಾಗಿಲು ಹಾಕಿಕೊಳ್ಳುತ್ತಿದ್ದರು. ಅಂದರೆ ಅವರು ಇರುವ ಮನೆ, ರಸ್ತೆ ಅಪವಿತ್ರವಾಗುತ್ತದೆ ಎಂಬ ಹುಚ್ಚು ಕಲ್ಪನೆ. ಅವರು ಹಾದುಹೋದಮೇಲೆ ಎಷ್ಟೋ ಜನರು ಗಂಗಾನದಿಯ ನೀರನ್ನು ಮನೆಯ ಹೊರಗೆ ಸಿಂಪಡಿಸಿ ಕಾಲು ಇಡುತ್ತಿದ್ದರು. ಇಂಥ ಕಠಿಣ ಪರಿಸ್ಥಿತಿಯಲ್ಲಿ ಬೇಗಮ್ ಅಖತರ್ ತಮ್ಮ ದಿಟ್ಟತನದಿಂದ ತಮ್ಮ ಕಾರ್ಯಕ್ಷೇತ್ರವನ್ನು ಗಟ್ಟಿಮಾಡತೊಡಗಿದರು. ಅವರು ಚಿಕ್ಕವರಿರುವಾಗಲೇ ತಾಯಿಯ ಹಾಡುಗಳನ್ನು ಕೇಳಿ ಇಂಪಾಗಿ ಹಾಡಲು ಪ್ರಯತ್ನಿಸುತ್ತಿದ್ದರು. ಬೇಗಮ್ ಅವರಿಗೆ ತಾಯಿಯೇ ಗುರು. ಹಾಗೆಯೇ ಪಂ. ಭೀಮಸೇನ ಜೋಶಿ ಅವರು ತಾಯಿಯಿಂದಲೇ ಹಾಡುಕೇಳುತ್ತಾ ಪುರಂದರ ದಾಸರ ಹಾಡುಗಳನ್ನು ಹಾಡತೊಡಗಿದರು. ಅಂದರೆ ಅವರಿಗೂ ತಾಯಿಯೇ ಮೊದಲನೆಯ ಗುರು. ನಾನು ಅನೇಕ ಕಲಾಕಾರರಿಂದ ಸಂಗೀತ ಸಭೆಗಳಲ್ಲಿ ಠುಮರಿ, ದಾದರಾ ಇತ್ಯಾದಿ ಕೇಳಿದ್ದೇನೆ. ಆದರೆ, ಬೇಗಮ್ ಅಖತರ್ ಹಾಗೆ ಕಲ್ಪನೆಗಳನ್ನು, ಭಾವನೆಗಳನ್ನು ಅನೇಕ ರೀತಿಯಲ್ಲಿ ಪ್ರಸ್ತುತಗೊಳಿಸಿ ಜನರ ಮನಸ್ಸನ್ನು ಸೆಳೆಯುವ ಕಲೆ ಕೇವಲ ಬೆರಳೆಣಿಕೆಯಷ್ಟು ಕಲಾವಿದರಿಗೆ ಮಾತ್ರ ಸಾಧ್ಯ.

✍ ಪಂ. ಜಿ.ಜಿ. ಜೋಶಿ ಆಗ್ರಾಘರಾಣಾ ಗಾಯಕರು

ಇಂದಿಗೆ ಅವರ ರೆಕಾರ್ಡ್‌ಗಳನ್ನು ಕೇಳಿದರೆ ಅವರ ಕೋಕಿಲ ಕಂಠದ ಸ್ವರ ಜೋಡಣೆಗಳಿಂದ ಕಲ್ಪನೆ ಸಾಮ್ರಾಜ್ಯದಲ್ಲಿ ರಸಿಕರನ್ನು ತೆಗೆದುಕೊಂಡು ಹೋಗುವ ಚಾತುರ್ಯ ಕೇವಲ ಬೇಗಮ್ ಅಖತರ್ ಅವರಿಗೆ ಮಾತ್ರ ಸಾಧ್ಯವಾಗಿತ್ತು ಅನ್ನಿಸುತ್ತದೆ.

ಇಂದು ಮುಂಬಯಿಯಲ್ಲಿ ಹಾಡಿದ ಗಝಲ್ ಆಗಲಿ, ಠುಮರಿ ಆಗಲಿ, ಪುಣೆಯಲ್ಲಿಯ ಮೈಫಿಲ್‌ನಲ್ಲಿ ಬೇರೆ ರೂಪವನ್ನೇ ಧರಿಸುತ್ತಿದ್ದವು. ಬೆಡಗಿನ ಸೌಂದರ್ಯ, ಕೋಕಿಲ ಕಂಠದ ಸಪ್ತ ಸೂರುಗಳ (ಸ್ವರಗಳ) ಆರಾಧನೆ ನಡೆದಂತೆ ಕಾಣುತ್ತಿತ್ತು. ಪ್ರತಿಯೊಂದು ಸಂಗೀತ ಸಭೆಯಲ್ಲಿಯೂ ನಾವಿನ್ಯತೆಯು ಕಂಡುಬರುತ್ತಿತ್ತು. ಸಂಗೀತವೆಂದರೆ ಮನುಷ್ಯನಿಗೆ ದುಃಖ ಮರೆಯಿಸುವ ದಾರಿ. 5 ನಿಮಿಷಗಳಲ್ಲಿ ಕೇಳುವವರು ಜಗತ್ತನ್ನೇ ಮರೆತುಹೋಗುತ್ತಾರೆ. ಅಂಥಹ ಶಕ್ತಿ ನಿರ್ಮಾಣ ಮಾಡಲು ದೇವರ ಅನುಗ್ರಹವೂ ಬೇಕು. ಉತ್ತಮ ಸಂಗೀತ ಸಾಧನೆ ಇರಬೇಕು. ಉತ್ತಮ ಗುರುಗಳ ಉಸ್ತಾದರ ಮಾರ್ಗದರ್ಶನ ಲಭಿಸಬೇಕು. ಅಂದರೆ ಇದೆಲ್ಲ ಸಾಧ್ಯ.

ಚಿಕ್ಕವಳಿದ್ದಾಗಲೇ ಅಖತರಿ ಬಾಯಿಗೆ ಸಂಗೀತದಲ್ಲಿ ಬಹಳೇ ಆಸಕ್ತಿ. ಹೀಗಾಗಿ ಅವಳ ತಾಯಿ ಶಹರದಲ್ಲಿ ಆಗುತ್ತಿದ್ದ ಎಲ್ಲ ಸಂಗೀತ ಸಭೆಗಳಿಗೆ ಚಿಕ್ಕ ಬಾಲಿಕೆಯಾದ 7 ವರ್ಷದ ಅಖತರಿಯನ್ನು ಕರೆದುಕೊಂಡು ಹೋಗುತ್ತಿದ್ದರು. ಅಲ್ಲಿಯ ಸಂಗೀತ ಕಾರ್ಯಕ್ರಮಗಳನ್ನು ಬಹಳೇ ಲಕ್ಷ್ಯಪೂರ್ವಕವಾಗಿ ಕೇಳಿ ಮನೆಯಲ್ಲಿಯೂ ಅದೇ ಖಯ್ಯಾಲ್ ಗಾಯಕಿಯನ್ನು ಹಾಡಲು ಪ್ರಯತ್ನಿಸುತ್ತಿದ್ದಳು. ಆಗ್ಗೆ ಸಹಜವಾಗಿಯೇ ಅವಳ ಧ್ವನಿ ಸ್ವರಗಳು ಹೆಚ್ಚಿ, ಗಾಯಕ ಗಾಯಕರೀಯರ ಹಾಗೆಯೇ ಹಾಡುತ್ತಿದ್ದಳು. ಇಂತಹ ಚಾತುರ್ಯ ಅಖತರಿಯಲ್ಲಿ ಕಾಣತೊಡಗಿತು. ಹೀಗಾಗಿ ಇವರ ತಾಯಿ ಅಖತರಿಯನ್ನು ಪಟಿಯಾಲಾ ಘರಾಣೆಯ ಉಸ್ತಾದ್ ಅತ್ತಾ ಮಹೊಮ್ಮದ್

*(ಪುಟ 8ಕ್ಕೆ)*

# ಭಕ್ತಿಯ ಮೂರ್ತಸ್ವರೂಪ - MS

ಕರ್ನಾಟಕ ಸಂಗೀತದ ಕೀರ್ತಿಪತಾಕೆಯನ್ನು ವಿಶ್ವದೆತ್ತರಕ್ಕೆ ಹಾರಿಸಿದ ಹೆಗ್ಗಳಿಕೆ ಗಾನವಿಧುಷಿ 'ಭಾರತರತ್ನ' ಎಂ.ಎಸ್. ಸುಬ್ಬುಲಕ್ಷ್ಮೀ ಅವರದು. ಇದೇ ಸೆಪ್ಟೆಂಬರ್ 16 ರಿಂದ ಅವರ ಜನ್ಮಶತಾಬ್ದಿ ವರ್ಷಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ. ಈ ನಿಮಿತ್ತ ಭಕ್ತಿರಸದ ಮೂರ್ತಿಮಂತ ಪ್ರತೀಕವಾಗಿದ್ದ ಸುಬ್ಬುಲಕ್ಷ್ಮೀ ಅವರ ಗಾನವ್ಯಕ್ತಿಮತ್ವದ ಕಿರು ಪರಿಚಯ...

ಮದುರೈ ಷಣ್ಮುಖವಡಿವು ಸುಬ್ಬುಲಕ್ಷ್ಮೀ ಅರ್ಥಾತ್ ಪ್ರಖ್ಯಾತ ಕರ್ನಾಟಕ ಶಾಸ್ತ್ರೀಯ ಸಂಗೀತದ ಗಾಯಕಿ ಎಂ.ಎಸ್. ಸುಬ್ಬುಲಕ,ಮೀ ಅವರ ಜನ್ಮ ಶತಾಬ್ದಿಯು ಈ ವರ್ಷ ಆಚರಿಸಲ್ಪಡುತ್ತಿದೆ. ಮನೆಯವರ ಮುದ್ದಿನ 'ಕುಂಜಮ್ಮ' ಎನ್ನುವ ಎಂ.ಎಸ್. ಅವರ ಜನ್ಮ ಮದುರೈಯಲ್ಲಿ 16 ಸೆಪ್ಟೆಂಬರ್ 1916 ರಂದು ಆಯಿತು. ಪುಟಾಣಿ ಕುಂಜಮ್ಮನ ಮೇಲೆ ಸಂಗೀತದ ಸಂಸ್ಕಾರ ಬಾಲ್ಯದಿಂದಲೇ ಆಯಿತೆನ್ನಬಹುದು. ದೇವದಾಸಿ ಪರಂಪರೆಯ ಅವರ ತಾಯಿ ವೀಣಾವಾದಕಿಯಾಗಿದ್ದರೆ, ಅವರ ಅಜ್ಜಿಯು ಉತ್ಕೃಷ್ಟ ಪಿಟೀಲು (Violin) ವಾದಕಿಯಾಗಿದ್ದರು. ಈ ರೀತಿ ಸಂಗೀತವು ಅವರಿಗೆ ರಕ್ತಗತವಾಗಿಯೇ ಸಿದ್ಧಿಸಿತ್ತು.

ಚಿಕ್ಕಂದಿನಿಂದಲೇ ಎಂ.ಎಸ್. ಅವರು ಕರ್ನಾಟಕ (ದಕ್ಷಿಣಾದಿ) ಸಂಗೀತದ ಶಿಕ್ಷಣವನ್ನು ಸೆಮ್ಮಂಗುಡಿ ಶ್ರೀನಿವಾಸ ಅಯ್ಯರ್ ಮತ್ತು ಹಿಂದುಸ್ಥಾನಿ (ಉತ್ತರಾದಿ) ಸಂಗೀತದ ಕೆಲವು ಅಂಶಗಳನ್ನು ನಾರಾಯಣ ರಾವ್ ವ್ಯಾಸ್ ಅವರಲ್ಲಿ ಅಭ್ಯಸಿಸಿದರು. ಮುಂದೆ ಸಂಗೀತದ ಹೆಚ್ಚಿನ ಆಳವಾದ ಸರ್ವಂಕಷ ತಾಲೀಮನ್ನು ಕೆ. ಸಾಂಬಶಿವ ಅಯ್ಯರ್, ಎಂ.ಎಸ್. ಭಾಗವತರ್ ಮತ್ತು ಅರಿಯಕುಡಿ ರಾಮಾನುಜ ಅಯ್ಯಂಗಾರ್ ಈ ಗುರುವರ್ಯರುಗಳಿಂದ ಪಡೆದರು. ಅತ್ಯಂತ ಲಾಲಿತ್ಯಪೂರ್ಣ, ಪರವಶಗೊಳಿಸುವ ಮೋಹಕ ಸ್ವರ ಪಡೆದಿರುವ ಎಂ.ಎಸ್. ಅವರ ಮೊಟ್ಟಮೊದಲ ಕಚೇರಿ (Concert) 1927ರಲ್ಲಿ ಅವರ ಹನ್ನೊಂದನೆಯ ವಯಸ್ಸಿನಲ್ಲಿ ಜರಗಿತು!. ಪಕ್ಕವಾದ್ಯಗಳಲ್ಲಿ ಮೈಸೂರು ಚೌಡಯ್ಯನವರ ಪಿಟೀಲುವಾದನ ಮತ್ತು ದಕ್ಷಿಣಾಮೂರ್ತಿ ಪಿಳ್ಳೈ ಅವರ ಮೃದಂಗವಾದನದೊಂದಿಗೆ ವಿಜೃಂಭಿಸಿದ ಈ ಕಾರ್ಯಕ್ರಮ ಅಪೇಕ್ಷೆಗೆ ಮೀರಿ ಯಶಸ್ವಿಯಾಯಿತು ಹಾಗೂ ಎಂ.ಎಸ್. ಅವರ ಪರಿವಾರ 1937ರಲ್ಲಿ ಚೆನ್ನೈಗೆ ಸ್ಥಳಾಂತರವಾಯಿತು.

ಆ ಕಾಲದಲ್ಲಿ ದೇವದಾಸಿ ಅಥವಾ ಕಲಾವಿದೆ ಸ್ತ್ರೀಯರು ಸಿನೆಮಾದಲ್ಲಿ ಪಾತ್ರವಹಿಸುವ ಪದ್ಧತಿಯು ಚಾಲ್ತಿಯಲ್ಲಿತ್ತು. ಅದಕ್ಕನುಗುಣವಾಗಿ 1938ರಲ್ಲಿ ಎಂ.ಎಸ್. ಅವರು 'ಸೇವಾಸದನ' ಎಂಬ ಸಿನೆಮಾದ ಮೂಲಕ ಬೆಳ್ಳಿಪರದೆಯ ಮೇಲೆ ಪಾದಾರ್ಪಣೆಗೈದರು. ಈ ಹೊತ್ತಿಗಾಗಲೇ ಎಂ.ಎಸ್. ಅವರ ಧ್ವನಿಮುದ್ರಿಕೆಗಳು ಬಿಡುಗಡೆಯಾಗತೊಡಗಿದ್ದವು. 'ಸೇವಾಸದನಂ' ಚಿತ್ರಪಟವು ಅವರ ವಸ್ತುನಿಷ್ಠತೆಯಿಂದ ಬಹಳ ಪ್ರಸಿದ್ಧಿ ಪಡೆಯಿತು. ಪುರೋಹಾಮೀ ವಿಚಾರಧಾರೆಯ ಈ ಚಲನಚಿತ್ರವನ್ನು ದಾಕ್ಷಿಣಾತ್ಯ ರಸಿಕರು ತುಂಬು ಹೃದಯದಿಂದ ಸ್ವಾಗತಿಸಿದರು. ಒಂದೆಡೆ ಸಂಗೀತ ಕಾರ್ಯಕ್ರಮಗಳ ಒತ್ತಡ ಇದ್ದಾಗಲೂ ಸಹ ಎಂ.ಎಸ್ ಅವರು 'ಶಕುಂತಲೈ', 'ಸಾವಿತ್ರೀ', (ತಮಿಳು ಮತ್ತು ಹಿಂದಿ) ಚಲನಚಿತ್ರಗಳಲ್ಲಿ ಅನುಕ್ರಮವಾಗಿ ಶಕುಂತಲೆಯ, ನಾರದನ ಹಾಗೂ ಮೀರಾಬಾಯಿಯ ಪಾತ್ರಗಳಲ್ಲಿ ನಟಿಸಿದ್ದರು.

ಬಾಲ್ಯದಲ್ಲೇ ಎಂ.ಎಸ್. ಅವರ ಕಂಠಸ್ವರವು ಬಹಳೇ ಏರುಪಟ್ಟಿಯಲ್ಲಿತ್ತು. ಅದರೊಂದಿಗೆ ಅವರು ಶಬ್ದೋಚ್ಛಾರದ ಮೇಲೂ ಗಮನಹರಿಸಿದರು. ಯಾವುದೇ ಭಾಷೆಯ ಕೃತಿಯನ್ನು ಹಾಡುವ ಮುನ್ನ ಆಯಾ ಭಾಷೆಗೆ ಅನುಗುಣವಾಗಿ ಚಾಚೂತಪ್ಪದೇ ತಮ್ಮ ಉಚ್ಛಾರ ಸರಿಯಾಗಿರಬೇಕೆಂಬ ಕಾಳಜಿಯಿಂದ ಹೆಚ್ಚಿನ ಮುತುವರ್ಜಿ ವಹಿಸುತ್ತಿದ್ದರು. ಇದರೊಂದಿಗೆ, ತಾವು ಹಾಡುವ ರಚನೆ (Coposition)ಯ ಅರ್ಥದ ತಿಳುವಳಿಕೆ ಇದ್ದರೆ ಮಾತ್ರ ಕಾವ್ಯಾರ್ಥಕ್ಕೆ ನ್ಯಾಯ ಸಿಗುವ ರೀತಿಯಲ್ಲಿ ಕಂಠಸ್ವರವನ್ನು ಅಳವಡಿಸಿಕೊಳ್ಳಲು ಸಾಧ್ಯ. ಕೇವಲ ಏರುಪಟ್ಟಿಯ ಮಧುರ ಸ್ವರದಿಂದ ಪ್ರಯೋಜನವಿಲ್ಲ. ಹಾಡುಗರ ಕಂಠವು ಅರ್ಥ ಮತ್ತು ಸಪ್ತಸ್ವರಗಳ ಮಾಧ್ಯಮ ಎಂಬುದರ ಅರಿವಿನೊಂದಿಗೆ ಅರ್ಥ ಬೋಧದಲ್ಲಿ ಸಂಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಂಡು ಹಾಡುತ್ತಿದ್ದುದರಿಂದ ಎಂ.ಎಸ್. ಅವರಿಂದು ಅಜರಾಮರರಾಗಿದ್ದಾರೆ. "ನಾನೋರ್ವ ವಿದ್ಯಾರ್ಥಿ, ಸಂಗೀತವು ಮಹಾ ಸಾಗರ. ಏನನ್ನು ಹಾಡುತ್ತೇವೆಯೋ ಅದರ ಅರ್ಥವನ್ನು ಗ್ರಹಿಸಿ ಪ್ರತಿ ಶಬ್ದದ ನಿರ್ದಿಷ್ಟ ಉಚ್ಛಾರದ ಕಲಿಕೆಯು ಬಹಳ ಮಹತ್ವದ್ದೆಂದು ನನ್ನ ಸ್ಪಷ್ಟ ನಿಲುವು" ಹೀಗೆಂದು ತನ್ನ ಎಪ್ಪತ್ತರ ವಯಸ್ಸಿನಲ್ಲಿ ಹೇಳುತ್ತಿದ್ದರು. ಇದರಿಂದ ಅವರಿಗೆ ಪರಿಪೂರ್ಣತೆಯ ಏಕನಿಷ್ಠೆಯ ಬಗ್ಗೆ ಎಷ್ಟೊಂದು ಚಿಂತನೆ ಇತ್ತೆಂಬುದನ್ನು ಅಂದಾಜಿಸಬಹುದು!.

ಹನ್ನೊಂದು ವರ್ಷದ ಎಂ.ಎಸ್. ಅವರಿಗೆ ಚೆನ್ನೈನ 'ಮ್ಯೂಸಿಕ್ ಅಕಾಡೆಮಿ'ಯು ಹಾಡುವ ಅವಕಾಶವನ್ನು ಕಲ್ಪಿಸಿದ್ದೇ ತಡ, ಆ ನಂತರದಲ್ಲಿ ಎಂ.ಎಸ್. ಅವರು



ನೋಡುನೋಡುತ್ತ ಇಡೀ ಜಗತ್ತನ್ನೇ ವ್ಯಾಪಿಸಿಬಿಟ್ಟರು!. ಎಂ.ಎಸ್. ಅವರು ಸಂಪೂರ್ಣ ವಿಶ್ವವನ್ನು ತಮ್ಮ ಭಕ್ತಿರಸದಿಂದ ತೇಲಿಸಿಬಿಟ್ಟರು. ಭಕ್ತಿಯ ತಲ್ಲೀನತೆಗೆ ಭಾಷೆ, ಜಾತಿಧರ್ಮ, ದೇಶಪ್ರಾಂತ್ಯಗಳ ಅಡೆತಡೆಗಳಿಲ್ಲ. ತನ್ನ ಅಸ್ತಿತ್ವವನ್ನು ಮರೆತು ತನ್ಮಯತೆಯಿಂದ ಆ ಜಗನ್ನಿಯಾಮಕನಿಗೆ ಆರ್ತನಾಗಿ ಮಾಡಿದ ಭಕ್ತನ ಕರೆ, ಜಗದ

**✍ ಡಾ. ಸುಧೀಂದ್ರ ಭವಾನಿ**

**ಮೂಲ ಮರಾಠಿ : ವಿದುಷಿ ಶೃತಿ ಸಡೋಲಿಕರ್ ಕಾಟ್ಕರ್**

ಎಲ್ಲೆಡೆ ಏಕಪ್ರಕಾರವಾಗಿರುತ್ತದೆ ಎಂಬುದರ ಸತ್ಯತೆಯು ಎಂ.ಎಸ್. ಅವರ ಗಾಯನ ಕರ್ತೃತ್ವದ ಮೂಲಕ ಹೊರಹೊಮ್ಮುತ್ತದೆ. (ದಾಸಶ್ರೇಷ್ಠ ಪುರಂದರ ದಾಸರ ಚತುಶ್ಯತಮಾನೋತ್ಸವದ ಸಂದರ್ಭದಲ್ಲಿ ಹಂಪಿಯ ಪುರಂದರದಾಸರ ಮಂಟಪದಲ್ಲಿ ಶ್ರೀ ಸಂಧ್ಯಾವಂದನಂ ಶ್ರೀನಿವಾಸರಾಯರಿಂದ ಕನ್ನಡದ ಉಚ್ಛಾರವನ್ನು ಸರಿಯಾಗಿ ಕಲಿತು ಎಂ.ಎಸ್. ಅವರು ನಡೆಸಿಕೊಟ್ಟ ಪುರಂದರದಾಸರ ಕೀರ್ತನೆಗಳ ವಿಶೇಷ ಕಚೇರಿಯ ಸೊಬಗು ಇಂದಿಗೂ ಸಮಸ್ತ ಕನ್ನಡಿಗರ ಮನಗಳಲ್ಲಿ ಅವಿಸ್ಮರಣೀಯವಾಗಿದೆ ಎಂಬುದನ್ನು ಇಲ್ಲಿ ನೆನಪಿಸಬಯಸುತ್ತೇನೆ - ಅನುವಾದಕ)

ತ್ಯಾಗರಾಜರೇ ಇರಲಿ, ನರಸಿ ಮೆಹ್ತಾ ಅಥವಾ ಮೀರಾಬಾಯಿ, ಪುರಂದರದಾಸರೇ ಇರಲಿ, ಅವರುಗಳ ಕೃತಿಗಳ, ಕಾವ್ಯದ ಒಂದೊಂದು ಶಬ್ದವೂ ಮಾಧುರ್ಯ, ಸೌಂದರ್ಯ, ನಾವೀನ್ಯತೆ ಹಾಗೂ ಸಮರ್ಪಣಾ ಭಾವದಿಂದೊಡಗೂಡಿಯೇ

ಕೇಳುಗರ ಹೃದಯವನ್ನು ತಟ್ಟುತ್ತಿದ್ದವು. ಹೀಗಾಗಿ ಎಂ.ಎಸ್. ಅವರು ವಿವಿಧ ಸಂಸ್ಥೆಗಳ ನಿಧಿಸಂಗ್ರಹ (Fund raising) ಕ್ಕಾಗಿ ಕೊಡಮಾಡಿದ ಸೇವಾರ್ಥ ಸಂಗೀತ ಕಚೇರಿಗಳ ಮಟ್ಟವೂ ಸಹ ಅತಿ ವಿಶಿಷ್ಟವಾಗಿರುತ್ತಿತ್ತು. ತಮ್ಮೆಲ್ಲ ಸಂಗೀತಿಕ ಗಳಿಕೆಯನ್ನು ಎಂ.ಎಸ್. ಅವರು 'ಇದಂ ನ ಮಮ' ಎಂದು ಜನತಾಜನಾರ್ದನನ ಅಡಿಗಳಿಗೆ ಅರ್ಪಿಸಿಬಿಡುತ್ತಿದ್ದರು.

ದಕ್ಷಿಣದ ರಾಜಕೀಯ ವಯಲದ ಪ್ರಸಿದ್ಧ ನೇತಾರ ಚಕ್ರವರ್ತಿ ರಾಜಗೋಪಾಲಾಚಾರಿ ಅವರ ಅನುಯಾಯಿ ಮತ್ತು ಸ್ವಾತಂತ್ರ್ಯ ಸೇನಾನಿ ತ್ಯಾಗರಾಜ ಸದಾಶಿವಂ ಅವರೊಂದಿಗೆ ಪ್ರೇಮವಿವಾಹ ಆದಂದಿನಿಂದ ಎಂ.ಎಸ್. ಅವರ ಜೀವನದಲ್ಲಿ ಬಹುದೊಡ್ಡ ಮಾರ್ಪಾಡಾಯಿತು. ದೇವದಾಸಿ ಪರಂಪರೆಯ ಸುವರ್ಣ ಸ್ತ್ರೀಗೆ ಕೌಟುಂಬಿಕ ಪ್ರೇಮ ಮತ್ತು ಪ್ರತಿಷ್ಠೆಯ ಕುಂದಣವಿಟ್ಟಂತಾಯಿತು!. ಸದಾಶಿವಂ ಅವರಿಗಂತೂ ಎಂ.ಎಸ್. ಅವರ ಏಳ್ಗೆಯೇ ಜೀವನದ ಗುರಿಯಾಯ್ತು. ಅತ್ಯಂತ ಗುಣಗ್ರಾಹಕರಾದ ಸದಾಶಿವಂ ಅವರು ತಮ್ಮ ಪತ್ನಿಯ ದೈವದತ್ತ ಗುಣಗಳ ಮತ್ತು ದಣಿವರಿಯದ ಪರಿಶ್ರಮದ ಮಹತ್ವವನ್ನು ಇಡೀ ಜಗತ್ತಿಗೆ ಮನದಟ್ಟು ಮಾಡಿಕೊಡುವುದರಲ್ಲಿಯೇ ತಮ್ಮ ಆಯುಷ್ಯವನ್ನು ವ್ಯಯಿಸಿದರು.

ಎಂ.ಎಸ್. ಅವರ ಕಂಠ ಮಾಧುರ್ಯವನ್ನು 'ನೈಟಿಂಗೇಲ್' 'ಕೋಗಿಲೆ', 'ಅಷ್ಟಮಸ್ವರ', 'ಸ್ವರಲಕ್ಷ್ಮೀ', 'ತಪಸ್ವಿನೀ' ಹೀಗೇ ಅನೇಕ ವಿಶೇಷಣಗಳಿಂದ ಬಣ್ಣಿಸಿದ್ದರೂ ಅವರು ಮಾತ್ರ ಪದ್ಮಪತ್ರದಂತೆ ಈ ಎಲ್ಲಾ ಶಬ್ದಾಡಂಬರಗಳಿಂದ, ದೊಡ್ಡಸ್ತಿಕೆಯ ಮೆರೆಯುವಿಕೆಯಿಂದ, ಗರ್ವಾಹಂಕಾರಗಳಿಂದ ಮುಕ್ತರಾಗಿ, ನಿರ್ಲಿಪ್ತರಾಗಿದ್ದರು. ಅವರಂತಹ ವಿನಯಶೀಲ ಗುಣವತಿ ಕಲಾವಿದೆಯರು ವಿರಳವೇ ಸರಿ!. ಎಂ.ಎಸ್. ಅವರಿಗೆ ಅನೇಕ ಮಾನಸನ್ಮಾನಗಳು ದೊರಕಿವೆ. 'ಪದ್ಮಭೂಷಣ', 'ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ', ಪ್ರಥಮ "ಸಂಗೀತ ಕಲಾನಿಧಿ ಪ್ರಶಸ್ತಿ, ರೇಮನ್ ಮೆಗಸೆಸೆ ಪ್ರಶಸ್ತಿ', 'ಪದ್ಮವಿಭೂಷಣ', 'ಕಾಳಿದಾಸ ಸನ್ಮಾನ', ರಾಷ್ಟ್ರೀಯ ಏಕಾತ್ಮತೆಯ 'ಇಂದಿರಾಗಾಂಧಿ ಸನ್ಮಾನ', ಇವಲ್ಲದೇ, ಭಾರತದ ಸರ್ವೋಚ್ಚ ನಾಗರಿಕ ಸನ್ಮಾನವಾದ "ಭಾರತ ರತ್ನ" ಪ್ರಶಸ್ತಿಯೂ ಅವರಿಗೆ ಲಭಿಸಿದೆ. ಈ ಹೊರತಾಗಿ ಅನೇಕ ಸಂಘ-ಸಂಸ್ಥೆಗಳು ವಿವಿಧ ಉಪಾಧಿಗಳಿಂದ ಅವರನ್ನು ಗೌರವಿಸಿವೆ. ಭಾರತ ಸರಕಾರವು ಎಂ.ಎಸ್. ಅವರ ಅಂಚೆ ಚೀಟಿ (Postal Stamp)ಯನ್ನೂ ಸಹ ಹೊರಡಿಸಿದೆ.

ಎಂ.ಎಸ್. ಸುಬ್ಬುಲಕ್ಷ್ಮೀಯವರ ಗಾಯನ ಕರ್ತೃತ್ವದ ಯಾದಿಯು (List) ಅತ್ಯಂತ ವಿಶಾಲವಾಗಿದೆ. ಅವರ ಈ ದೇದೀಪ್ಯಮಾನ ಯಶಸ್ಸಿನೊಂದಿಗೆ ವಿನಮ್ರತೆ ಮತ್ತು ಆಧ್ಯಾತ್ಮಿಕತೆಯ ಸುರಕ್ಷಿತ ಕವಚವಿದ್ದುದರಿಂದಲೇ ಯಾರೂ ಅಸೂಯಿಸುವಂತಹ ಭವ್ಯ ಕೀರ್ತಿಯಿಂದ ವಿಚಲಿತರಾಗದೇ ಎಂ.ಎಸ್. ಅವರು ಸ್ಥಿತಪ್ರಜ್ಞರಂತಿರಲು ಸಾಧ್ಯವಾಯಿತು.

ತಮ್ಮ ಜೀವನದಲ್ಲಿಯ ಯಾವುದೇ ಮಹತ್ವದ ನಿರ್ಣಯವನ್ನು ತಮ್ಮ ಜೀವನದಲ್ಲಿಯ ಯಾವುದೇ ಮಹತ್ವದ ನಿರ್ಣಯವನ್ನು (ಎಂ.ಎಸ್. ಅವರು ತೆಗೆದುಕೊಳ್ಳುವ ಮೊದಲು) ಕಾಂಚಿ ಕಾಮಕೋಟಿ ಮಠದ ಪರಮಾಚಾರ್ಯರಾದ ಶ್ರೀ ಚಂದ್ರಶೇಖರೇಂದ್ರ ಸರಸ್ವತಿ ಸ್ವಾಮಿಗಳ ಸಲಹೆಯನ್ನು ಪಡೆಯುತ್ತಿದ್ದರು. ಭಾರತ-ಪಾಕ್ ಯುದ್ಧದ ಹಿನ್ನೆಲೆಯಲ್ಲಿ 1966ರಲ್ಲಿ ಸಾರ್ವದೇಶಿಕ ಶಾಂತಿ ಸಂದೇಶ ಬೀರಲೋಸುಗ ಸಂಯುಕ್ತ ರಾಷ್ಟ್ರ ಸಂಘವು (UNO) ಎಂ.ಎಸ್. ಅವರನ್ನು ವಿಶೇಷ ಗಾಯಕಿಯಾಗಿ ಆಮಂತ್ರಿಸಿತು. ಕಾಂಚಿ ಪರಮಾಚಾರ್ಯರು ತಮ್ಮ ಶಿಷ್ಯೆಗಾಗಿ ಈ ಸಂದರ್ಭದಲ್ಲಿ "ಮೈತ್ರಿಮ್ ಭಜತ" ಎಂಬ ಕಾವ್ಯವನ್ನು ರಚಿಸಿ ಕರುಣಿಸಿದರು. ಈ ಅಷ್ಟಕವು ಸುಲಭ ಸಂಸ್ಕೃತದಲ್ಲಿದ್ದು, ಇದರ ಸಂಗೀತ ದಿಗ್ದರ್ಶನವನ್ನು ವಸಂತ ದೇಸಾಯಿಯವರು ಮಾಡಿದ್ದಾರೆ. ಅಮೇರಿಕಾದ ಕಾರನೇಗಿ ಹಾಲ್‌ನಲ್ಲಿ "ದಾಕ್ಷಿಣಾತ್ಯ ಕರ್ನಾಟಕ ಸಂಗೀತದ ಪ್ರಥಮ ಮಹಿಳೆ" ಎಂದು ಎಂ.ಎಸ್. ಅವರನ್ನು ಪರಿಚಯಿಸಲಾಯಿತು. 1966ರ ಅಕ್ಟೋಬರ್ 21 ರಂದು ಮೊದಲ ಬಾರಿಗೆ ಅವರು ಈ ಅಷ್ಟಕವನ್ನು ಹಾಡಿದರು. ಈ ಅಷ್ಟಕವು ಕೇವಲ ಶಾಂತಿ, ವಿಶ್ವಬಂಧುತ್ವದ ಸಂದೇಶವಷ್ಟೇ ಅಲ್ಲ, ಇದು ಅವರ ಜೀವನದ ಸಾರ್ಥಕತೆಯ, ದಕ್ಷಿಣಾದಿ ಉತ್ತರಾದಿ ಸಂಗೀತಕಾರರ ನಡುವಿನ ಪ್ರೇಮದ, ಮೈತ್ರಿಯ ಸೇತುವೆಯಾಗಿ ಅವರು ಬಾಳಿದ ರೀತಿಯ, ಸಂಗೀತದ ಏಳ್ಗೆಗಾಗಿ ಶ್ರಮಿಸುತ್ತಿರುವ ಸಂಸ್ಥೆಗಳಿಗಾಗಿ ಧರ್ಮಾರ್ಥ ಸಂಗೀತ ಸೇವೆ ನೀಡುತ್ತಿದ್ದುದರ ಸಾರಾಂಶವೇ ಆಗಿದೆ.

ಜಗತ್ಕಲ್ಯಾಣಕ್ಕಾಗಿ ಸಂತ ಶ್ರೇಷ್ಠರು ಕಾರ್ಯಪ್ರವೃತ್ತರಾಗಿರುತ್ತಾರೆ ಎಂಬುದನ್ನೇ ಈ ಅಷ್ಟಕವು ಎತ್ತಿ ತೋರಿಸುತ್ತದೆ. ಈ ಸಂದೇಶವೇ ಕಾಂಚಿ ಶ್ರೀಗಳ ಶಬ್ದಗಳಲ್ಲಿ ಹಾಗೂ ಸುಬ್ಬುಲಕ್ಷ್ಮೀಯವರ ಸುವರ್ಣ ಸ್ವರದಲ್ಲಿ ನಿನಾದಿಸುತ್ತಿದೆ.

"ದಾಮ್ಯತ, ದತ್ತ, ದಯಧ್ವಂ ಜನತಾಃ|
ಶ್ರೇಯೋ ಭೂಯಾತ್ ಸಕಲ ಜನಾನಾಮ್||"

ಆ ಕೋಕಿಲ ಕಂಠದ ಸ್ವರಸಾಧಕಳಿಗೆ ಶತಶಃ ಪ್ರಣಾಮಗಳು!. ■

## ...'ಬೇಗಮ್ ಅಖತರ್'

ಖಾನ್‌ರಲ್ಲಿ ಕರೆದುಕೊಂಡು ಹೋದಳು. ಅಖತರಿಯ ಸಂಗೀತದಲ್ಲಿಯ ಅಭಿರುಚಿ, ಆಸಕ್ತಿ ನೋಡಿ ಅತ್ತಾ ಮೊಹಮ್ಮದ್ ಖಾನ್‌ರು ಶಾಸ್ತ್ರೀಯ ಸಂಗೀತವನ್ನು ಪಟಿಯಾಲಾ ಘರಾಣೆಯ ಪದ್ಧತಿಯಲ್ಲಿ ಕಲಿಸತೊಡಗಿದರು. ಶಿಷ್ಯಳಲ್ಲಿಯ ಇಂಪಾದ ಸ್ವರ ಕೇಳಿ ಅಖತರಿಗೆ ಹೆಚ್ಚಾಗಿ ಉಪ ಶಾಸ್ತ್ರೀಯ ಸಂಗೀತ ಕಲಿಸತೊಡಗಿದರು. ಆಗ್ಗೆ ಅಖತರಿ ತನ್ನ ಪ್ರಭಾವಶಾಲಿ ಸ್ವರಗಳಿಂದ ತನ್ನ ನೈಪುಣ್ಯತೆಯನ್ನು ಗುರುಗಳ ಎದುರಿಗೆ ಪ್ರಕಟಿಸ ಹತ್ತಿದ್ದಳು. ಆದರೂ ಸಹ ಉಸ್ತಾದರು ಹೇಳಿದರು, "ವ್ಹಾ ಬೇಟೆ, ತೇರಿ ಸ್ವರೊಂಕೊ ಮೇರಿ ಜವಾಬ್ ನಹಿ" (ನಿನ್ನ ಸ್ವರಗಳ ವಿಸ್ತಾರಕ್ಕೆ ನನ್ನ ಉತ್ತರ ಇಲ್ಲ) ಹೀಗೆ ಗುರುಗಳ ಪ್ರೀತಿಗೆ ಪಾತ್ರಳಾದಳು. ಉಪಶಾಸ್ತ್ರೀಯ ಸಂಗೀತದಲ್ಲಿ ಅಖತರಿ ಅವರ ಕಂಠದಿಂದ ಅನೇಕ ಭಾವನೆಗಳು ಪ್ರಕಟವಾಗುತ್ತಿದ್ದವು. ಸ್ವರಗಳಲ್ಲಿಯ ಮುರಖಿ, ಖಟಕಿ ಮೀಂಡ ಸಹಜವಾಗಿಯೇ ಸಂಗೀತದಲ್ಲಿ ಏಕರೂಪವಾಗಿ ಹೊರಬರುತ್ತಿದ್ದವು. ಅಖತರಿ 7 ವರ್ಷದವರು ಇದ್ದಾಗ ಆಗಿನ ಕಾಲದಲ್ಲಿ ಸುಪ್ರಸಿದ್ಧ ಗಾಯಕಿಯಾದ ಚಂದ್ರಾಬಾಯಿಯ ಗಾಯನದಿಂದ ಪ್ರಭಾವಿತಳಾದಳು. ಇವಳ ಚಿಕ್ಕಪ್ಪ ಉಸ್ತಾದ್ ಇನಾಯೆತ್ ಖಾನ್ ಸಾರಂಗೀ ವಾದಕರಾಗಿದ್ದರು. ಅಖತರಿ ಎದುರಿಗೆ ಕುಳಿತು ರಾಗಗಳನ್ನು ಕೇಳುತ್ತಿದ್ದಳು. ಸಾರಂಗಿಯಲ್ಲಿ ಬಾರಿಸಿದ ಮೀಂಡ ತನ್ನ ಕಂಠದಲ್ಲಿ ಹಾಕಿಕೊಳ್ಳಲು ಪ್ರಯತ್ನಿಸುತ್ತಿದ್ದಳು. ಇಂತಹ ಚಾತುರ್ಯತೆಯನ್ನು ಕಂಡು ಉಸ್ತಾದ್ ಇನಾಯತ್ ಖಾನರು ಬಹಳೇ ಆಶ್ಚರ್ಯಪಡುತ್ತಿದ್ದರು. ತನ್ನ ತಾಯಿಯ ಜೊತೆಗೆ ಕೊಲಕತ್ತಾಕ್ಕೆ ಹೋಗಿ ಅಲ್ಲಿಯ ಸುಪ್ರಸಿದ್ಧ ಉಸ್ತಾದ್ ಮೊಹಮ್ಮದ್ ಖಾನ್, ಅಬ್ದುಲ್ ವಹೀದ ಖಾನ್ ಇವರಲ್ಲಿ ಶಾಸ್ತ್ರೀಯ ಸಂಗೀತ ಕಲಿಯ ತೊಡಗಿದಳು. ಕೊನೆಗೆ ಝುಂಡೇ ಖಾನರಲ್ಲಿ ತನ್ನ ಶಿಕ್ಷಣವನ್ನು ಮುಂದುವರಿಸಿದಳು. ಬೇಗಮ್ ಅಖತರ್ ಅವರ ಮೊದಲನೆಯ ಸಂಗೀತ ಸಭೆ ವಯಸ್ಸಿನ 15 ನೆಯ ವರ್ಷದಲ್ಲಿ ಕಲಕತ್ತಾದಲ್ಲಿ ಜರಗಿತು. ಹಿಂದುಸ್ಥಾನೀ ಶಾಸ್ತ್ರೀಯ ಸಂಗೀತದಲ್ಲಿ ಮೊದಲನೆಯ ಸ್ತ್ರೀ ಕಲಾವಿದೆ ಎಂಬ ಹೆಸರು ಪಡೆದರು. ಆಗ ಅವರಿಗೆ "ಮಲ್ಲಿಕಾ ಏ ಗಝುಲ್" ಅಂತಾ ಬಿರುದು ಕೊಡಲಾಯಿತು. ಇವರ ಕಾರ್ಯಕ್ರಮಗಳು ದೇಶದ ತುಂಬ ಆಗತೊಡಗಿದವು. ಇವರ ಶಿಷ್ಯರಾದ ಶಾಂತಿ ಹಿರಾನಂದ, ರೀತಾ ಗಾಂಗುಲಿ ಕೊಠಾರಿ (ದೆಹಲಿ) ಬೇಗಮ್ ಅಖತರ್ ಅವರ ಪರಂಪರೆಯನ್ನು ಮುಂದುವರಿಸಿದ್ದಾರೆ. ಇವರು ನನ್ನೊಡನೆ ಮಾತನಾಡುವಾಗ ನಗುಮುಖ, ನಮ್ರತೆ ಎದ್ದು ಕಾಣುತ್ತಿತ್ತು. ತಮ್ಮ ಜೀವನದಲ್ಲಿ ಎಷ್ಟೇ ಕಷ್ಟನಷ್ಟಗಳು ಬಂದರೂ ಅವುಗಳನ್ನು ನಗುಮುಖದಿಂದಲೇ ಧೈರ್ಯವಾಗಿ ಎದುರಿಸಿದರು. ಅಖತರಿ ಅವರ ಪತಿಯು ಬೇರೆ ಊರಿಗೆ ಮೈಫಿಲ್ಲಿಗೆ ಹೋಗಬಾರದೆಂದು ಕಟ್ಟಪ್ಪಣೆ ಮಾಡಿದರು. ನಿನಗೆ ಬೇಕಾದಷ್ಟು ಹಣ, ಬಂಗಾರ ಕೊಡುತ್ತೇನೆ ಅಂತಾ ಹೇಳಿದರೂ ಲಕ್ಷ್ಯಕೊಡದೆ ತಮ್ಮ ಮನೆಯ ಬೇರೆ ಬಾಗಿಲಿನಿಂದ ಹೊರಗೆ ಹೋಗಿ ಹಾರ್ಮೋನಿಯಂ, ತಬಲಾ ಸಾಥಿದಾರರೊಂದಿಗೆ ಲಖನೌನಿಂದ ದೆಹಲಿ ಇತ್ಯಾದಿ ಶಹರಗಳಲ್ಲಿ ಕಾರ್ಯಕ್ರಮ ಕೊಡಲು ಪ್ರಾರಂಭಿಸಿದರು. ಪತಿಯಿಂದ ಕಷ್ಟ ಅನುಭವಿಸಬೇಕಾಗಿ ಬಂದರೂ ಸಂಗೀತ ಸಾಮ್ರಾಜ್ಯದಲ್ಲಿ ಸುಖವಾಗಿಯೇ ಇದ್ದರು.

# ಋಣ

ಗಂಗವ್ವ ಮದುವೆಯಾಗಿ ಆ ಮನೆಗೆ ಬಂದಾಗ ಅದೊಂದು ಮನೆಯಾಗಿರಲಿಲ್ಲ, ಗುಡಿಸಲು ಎಂದರೆ ಸರಿಹೋದೀತು. ನಾಲ್ಕೂ ಕಡೆ ಬಿದಿರು ನಿಲ್ಲಿಸಿ ಕಟ್ಟಿದ ತಡಿಕೆಗಳು ಎಂಥೆಂಥವೊ ಕಟ್ಟಿಗೆಗಳನ್ನು ಜೋಡಿಸಿ ಹುಲ್ಲು ಹಾಕಿದ ಮಣ್ಣಿನ ಮಾಡು ಅದಕ್ಕೊಂದು ತಗಡಿನ ಬಾಗಿಲು. ನಾಲ್ಕೆಂಟು ಮಣ್ಣಿನ ಮಡಕೆಗಳು ಒಂದೆರಡು ಅಲ್ಯೂಮಿನಿಯಂ ತಾಟು ಲೋಟಗಳು ಇವಿಷ್ಟೇ ಗಂಡ ಬಸಪ್ಪನ ಆಸ್ತಿ ಎನ್ನುವುದನ್ನು ತಿಳಿಯಲು ಅವಳಿಗೆ ಬಹಳ ಸಮಯ ಬೇಕಾಗಲಿಲ್ಲ. ಬಸಪ್ಪ ಗೌಡರ ಮನೆಯಲ್ಲಿ ಜೀತಕ್ಕಿದ್ದ. ಎರಡು ಹೊತ್ತು ಊಟ ಬಟ್ಟೆ ಕೊಟ್ಟು ವರ್ಷಕ್ಕೆ ಎರಡು ನೂರು ರೂಪಾಯಿ ಕೊಡಬೇಕೆಂದು ಮಾತಾಗಿದ್ದರೂ ಬಸಪ್ಪ ಎಂದೂ ಎರಡು ನೂರು ರೂಪಾಯಿಗಳನ್ನು ಇಸಿದುಕೊಂಡಿರಲಿಲ್ಲ. ತನಗೆ ಆಗೀಗ ಚಾ ಚುಟ್ಟಾಕ್ಕೆ ಬೇಕಾದಾಗ ಅಷ್ಟಿಷ್ಟು ಇಸಗೊಳ್ಳುತ್ತಿದ್ದ. ಗೌಡರಿಗೂ ಇದರಲ್ಲಿ ಲಾಭವೇ ಇದ್ದದ್ದರಿಂದ ಅವರೂ ಈ ಲೆಕ್ಕ ಮಾಡುವ ಪಾಪಕ್ಕೆ ಹೋಗಿರಲಿಲ್ಲ. ಬಸಪ್ಪ ಸೀದಾ ಸಾದಾ ಮನುಷ್ಯ. ಆದರೆ ಗಂಗವ್ವ ತನ್ನ ಗಂಡನಿಗೆ ಗೌಡರು ಮಾಡುತ್ತಿರುವ ಮೋಸ ಅರಿತಳು. ಬಸಪ್ಪ ಬೇಡವೆಂದರೂ ಕೇಳದೇ ಗೌಡರ ಮನೆಗೆ ಗಂಡನನ್ನು ಕರೆದುಕೊಂಡು ಹೋದಳು. ಎಂದೂ ಲೆಕ್ಕದ ಗೊಡವೆಗೆ ಹೋಗದ ಗೌಡರಿಗೆ ಇರಿಸು ಮುರಿಸಾದರೂ ಎಲ್ಲದಕ್ಕೂ ಕೋಲೆ ಬಸವನಂತೆ ಗೋಣು ಅಲ್ಲಾಡಿಸುತ್ತಾ ಇಪ್ಪತ್ತನಾಲ್ಕು ಗಂಟೆಯೂ ಕೆಲಸ ಮಾಡುವ ಆಳನ್ನು ಕಳೆದುಕೊಳ್ಳುವ ಮನಸ್ಸಾಗದೇ ಎರಡು ನೂರು ರೂಪಾಯಿಗಳನ್ನು ಗಂಗವ್ವನ ಉಡಿಯಲ್ಲಿ ಹಾಕಿದರು.

ಅಂದಿನಿಂದ ಬಸಪ್ಪನ ದಿನಚರಿಯೇ ಬದಲಾಯಿತು. ದಿನಾಲೂ ಎರಡಾಣೆ ಬಸಪ್ಪನ ಕೈಗೆ ಬೀಳುತ್ತಿತ್ತು. ಬಸಪ್ಪನ ಊಟವಂತೂ ಗೌಡರ ಮನೆಯಲ್ಲೆ ಮುಗಿಯುತ್ತಿದ್ದುದರಿಂದ ಗಂಗವ್ವ ಏನಾದರೊಂದು ತಿಂದು ಕೂಲಿ ಕೆಲಸಕ್ಕೆ ಹೋಗತೊಡಗಿದಳು. ಪಕ್ಕದ ಮನೆಯ ಕಾಳು ಮಾರುವ ನೀಲಮ್ಮನು ಹೇಳಿದ ಕೆಲಸ ಮಾಡುತ್ತಿದ್ದಳು ಹಾಗೂ ಅದರ ಲಾಭ ನಷ್ಟಗಳನ್ನು ತಿಳಿದುಕೊಂಡಳು. ತಾನೂ ಈ ವ್ಯಾಪಾರ ಮಾಡಬಾರದೇಕೆ ಎಂದು ಯೋಚಿಸಿ ನೀಲಮ್ಮನಿಗೆ ತಿಳಿಸಿದಳು ಇಬ್ಬರೂ ಕೂಡಿ ವ್ಯಾಪಾರ ಮಾಡುವುದರಿಂದ ಗಂಗವ್ವನಕ್ಕಿಂತಲೂ ನೀಲಮ್ಮನಿಗೇ ಹೆಚ್ಚು ಅನುಕೂಲವಾಯಿತು.

ದಿನಗಳೆದಂತೆ ಗಂಗವ್ವ ಎರಡು ಮಕ್ಕಳ ತಾಯಿಯಾದಳು. ಪೈಸೆಗೆ ಪೈಸೆ ಕೂಡಿಸಿ ಪುಟ್ಟಿ ಗಂಟು ಮಾಡಿದಳು. ಉಣ್ಣಲು ಕಾಳಾಗುವ ಒಂದು ಪುಟ್ಟ ಹೊಲ ಇರಲೊಂದು ಮಣ್ಣಿನ ಮನೆ ಕಟ್ಟಿಕೊಳ್ಳಬೇಕೆಂಬ ಅವಳ ಬಹುದಿನದ ಕನಸು ಚಿಗುರೊಡೆಯಿತು.

ಮಗ ಮಾನಿಂಗನನ್ನು ಶಾಲೆಗೆ ಹೆಸರು ಹಚ್ಚಿ ಬಂದ ದಿನ ತನ್ನ ಮಗ ಖುರ್ಚಿಯ ಮೇಲೆ ಕೂಡುವ ಸಾಹೇಬನನ್ನಾಗಿ ಮಾಡಬೇಕೆಂದು ಗಂಗವ್ವ ಕನಸು ಕಂಡಳು. ಆದರೆ ಮಾನಿಂಗ ಏನು ಮಾಡಿದರೂ ಮೂರನೆಯ ಕ್ಲಾಸು ದಾಟಲಿಲ್ಲ. ಮಾದೇವಿ ಮಾತ್ರ ಏಳನೆಯ ಕ್ಲಾಸನ್ನು ಸಲಿಸಾಗಿ ದಾಟಿದಳು. ಹೆಣ್ಣು ಮಕ್ಕಳಿಗೆಂತಾ ಓದು ಎಂದು ಇಬ್ಬರನ್ನು ಶಾಲೆ ಬಿಡಿಸಿ ಕೂಲಿ ಕೆಲಸಕ್ಕೆ ಹಚ್ಚಿದಳು. ನಾಲ್ವರೂ ದುಡಿಯುತ್ತಿದ್ದುದರಿಂದ ಗಂಗವ್ವನ ಪುಟ್ಟಿ ಗಂಟು ದೊಡ್ಡದಾಯಿತು.

ಅದೇ ಸಮಯದಲ್ಲಿ ಗಂಗವ್ವನ ತಂದೆ ದೈವಾಧೀನರಾದ ಸುದ್ದಿ ಬಂತು. ಗಂಗವ್ವನಿಗೆ ತಂದೆಯನ್ನು ಬಿಟ್ಟರೆ ತನ್ನವರೆನ್ನುವವರು ಯಾರೂ ಇಲ್ಲ. ಗಂಗವ್ವ ಬಚ್ಚಿಟ್ಟದ್ದೆಲ್ಲಾ ಬಿಟ್ಟು ತವರೂರಿಗೆ ಬಂದು ತಂದೆಯ ಸಂಸ್ಕಾರವನ್ನೆಲ್ಲಾ ಮುಗಿಸಿದಳು. ತಂದೆ ಮಾಡಿದ ಮನೆಯೊಂದಿತ್ತು. ಅದನ್ನು ಹಾಗೇ ಬಿಟ್ಟರೆ ಆ ಹಳ್ಳಿಯ ಜನರು ಅದರ ಕಲ್ಲು ಮಣ್ಣುಗಳನ್ನು ಕೂಡಾ ಉಳಿಸುವದಿಲ್ಲ ಎಂದು ಯೋಚಿಸಿ ಹಳ್ಳಿಯ ನಾಲ್ಕು ಹಿರಿಯರನ್ನು ಕೂಡಿಸಿ ಮನೆಯನ್ನು ಮಾರಾಟ ಮಾಡಿದಳು. ಇದ್ದು ಬಿದ್ದ ಸಾಮಾನನ್ನು ತೆಗೆದುಕೊಂಡು ತನ್ನೂರಿಗೆ ಬಂದಳು.

ಕೈಯ್ಯಲ್ಲಿ ಹಣವಿದ್ದುದರಿಂದ ಗಂಗವ್ವ ಒಬ್ಬ ಗೌಂಡಿಯನ್ನು ನೇಮಿಸಿಕೊಂಡು ಮಕ್ಕಳನ್ನು ಕರೆದುಕೊಂಡು ಆ ತಡಿಕೆ ಮನೆಯನ್ನು ಎರಡಂಕಣದ ಮಣ್ಣಿನ ಮನೆಯನ್ನಾಗಿ ಕಟ್ಟಿಕೊಂಡಳು. ಮಾದೇವಿ ಮಾನಿಂಗನ ಮದುವೆ ಮಾಡಿದಳು. ಮೊಮ್ಮಕ್ಕಳನ್ನು ಕಂಡು ಹಿರಿಹಿರಿ ಹಿಗ್ಗಿದಳು. ಅಂದು ಏಳುತ್ತಲೇ ಗಂಗವ್ವನ ಬಲಗಣ್ಣು ಅದುರಿತು. 'ಯಾವ ಅನಿಷ್ಟ ಸುದ್ದಿ ಕೇಳ್ತೀನೋ' ಎಂದುಕೊಳ್ಳುವಾಗಲೇ ಮಗಳು ಮಾದೇವಿಯ ಗಂಡ ಸತ್ತ ಸುದ್ದಿ ಬಂತು. ಮಗಳು ಮಾದೇವಿ ವಿಧವೆಯಾದದ್ದು ತಿಳಿದು ಗಂಗವ್ವನ ಗಂಡೆದೆಯೂ ಒಡೆದು ನೀರಾಯಿತು. ಸಂಸ್ಕಾರದ ಕೆಲಸವೆಲ್ಲಾ ಮುಗಿದ ನಂತರ ಅಲ್ಲಿದ್ದರೆ ಮೊಮ್ಮಗ ಸದಾಶಿವನ ಓದು ಕುಂಠಿತವಾದೀತು ಎಂದು ತನ್ನೊಡನೆ ಕರೆದೊಯ್ಯುವ ನಿರ್ಧಾರ ಮಾಡಿದಳು. ಅದೊಂದು ಒಕ್ಕಲುತನದ ಮನೆ ಅಲ್ಲಿ ಪುಸ್ತಕ ಪೆನ್ನುಗಳಿಗಿಂತ ಹೊಲ ಎತ್ತು ದುಡಿತ ಅದಕ್ಕೆ ಮಹತ್ವ.

ಹೀಗಿರುವಾಗ ಭೂಮಿ ಇಲ್ಲದವರಿಗೆ ಸರಕಾರ ಭೂಮಿ ಕೊಡುವ ಸುದ್ದಿ ಗಂಗವ್ವನಿಗೆ ತಿಳಿಯಿತು. ಗಂಗವ್ವ ಅರ್ಜಿ ಹಾಕಿದಳು. ಕೆಲವರು ಆಡಿಕೊಂಡು ನಕ್ಕರು. ಕೆಲವರು ಗಂಗವ್ವ ಮನಸ್ಸು ಮಾಡಿದರೆ ಆದೀತು ಎಂದರು. ಯಾರ್ಯಾರದೋ ಕೈ ಕಾಲು ಹಿಡಿದು ಗಂಗವ್ವ ಜಮೀನು ಖರೀದಿಸಿಯೇ ಬಿಟ್ಟಳು.

ಗಂಗಮ್ಮ ಹೊಲ ಹಿಡಿದದ್ದೇ ತಡ, ಊಟ ನಿದ್ದೆ ಮರೆತಳು. ಹೊಲದ ಬದುವಿನಲ್ಲಿ ನಿಂತು ಹಣೆಯ ಮೇಲೆ ಕೈಯಿಟ್ಟು ಹೊಲವನ್ನೊಮ್ಮೆ ವೀಕ್ಷಿಸಿದಳು ಹೊಲದ ತುಂಬ ಸಣ್ಣ ದೊಡ್ಡ ಕಲ್ಲುಗಳು ಮಾತ್ರ ಕಂಡವು. ಹೇಗಾದರೂ ಮಾಡಿ ಇದನ್ನು ಹಸನು ಮಾಡಿ ತನ್ನ ಸಂಸಾರಕ್ಕೆ ಬೇಕಾದ ಕಾಳನ್ನು ಇದರಲ್ಲಿ ಬೆಳೆಸಬೇಕು, ಪಕ್ಕದಲ್ಲೆ ಇರುವ ಗೌಡರ ಹೊಲದ ಬೆಳೆ ಗಂಗವ್ವನಲ್ಲಿ ಆಶಾಭಾವನೆ ಹುಟ್ಟಿಸಿತು. ಅಲ್ಲಿ ಕಾಳು ಬೆಳೆಯಬಹುದಾದರೆ ತನ್ನ ಹೊಲದಲ್ಲಿ ಯಾಕೆ ಬೆಳೆಯಬಾರದು ಎಂದು ಅಂದುಕೊಂಡಳು. ಗೌಡರು ದುಡ್ಡಿದ್ದವರು ಆದರೆ ತಾನು ತನ್ನ ಮಗ ಸೊಸೆ ಎಲ್ಲರೂ ದುಡಿದು ಇದರಲ್ಲಿ ಬಂಗಾರದ ಬೆಳೆ ತೆಗೆಯಬೇಕು ಎಂದು ನಿಶ್ಚಯಿಸಿದಳು.

ನಿರ್ಧಾರ ಮಾಡಿದ್ದೇ ತಡ ಗುಡಿಸಲು ಹಾಕುವ ಜಾಗ ಪೂಜೆ ಮಾಡಿ ಅಲ್ಲಿರುವ ಕಲ್ಲು ತೆಗೆದು ಬದುವಿಗೆ ಹಾಕಿದರು. ಮಾದೇವಿಯೂ ಕೈಗೂಡಿಸಿದಳು.

**✍ ಚಂಪಾವತಿ ನಾವದಗಿ**

ಅಗೆದಷ್ಟು ಸಣ್ಣ ದೊಡ್ಡ ಕಲ್ಲುಗಳು ಬಂದೇ ಬರುತ್ತಿದ್ದವು. ಮನೆಯಿಂದ ಯಾರಾದರೊಬ್ಬರು ಅವಳಿಗೆ ಊಟ ತರುತ್ತಿದ್ದರು ಅದನ್ನು ತಿಂದು ಕಣ್ಣಿಗೆ ನಿದ್ದೆ ಎಳೆಯುವತನಕ ಕೆಲಸ ಮಾಡುತ್ತಿದ್ದಳು. ಆ ವರ್ಷವೆಲ್ಲಾ ಕಲ್ಲು ತೆಗೆದದ್ದೇ ಬಂತು. ಒಂದು ಮೊರ ಕಾಳು ಕೂಡಾ ಬರಲಿಲ್ಲ. ಕಂಡಕಂಡವರ ಹೊಲದಲ್ಲಿ ಕೂಲಿ ಮಾಡಿ ಭೂಮಿಯ ಒಳಹೊರಗನ್ನು ಅರಿತಿದ್ದಳು. 'ನೂರಾರು ವರ್ಷ ಪಾಳು ಬಿದ್ದ ಭೂಮಿ ಒಂದು ವರ್ಷ ಗೇಮೆ' ಮಾಡಿದ್ರೆ ಫಲ ಕೊಟ್ಟಿತಾ' ಇನ್ನೂ ಇದರ ಸೇವೆ ಮಾಡ್ಬೇಕು ಎಂದು ಮನದಲ್ಲಿಯೇ ನಿಶ್ಚಯಿಸಿದಳು.

ಗಂಗವ್ವ ಹಟದಿಂದ ಹೊಲವನ್ನು ಮತ್ತಷ್ಟು ಮುತುವರ್ಜಿಯಿಂದ ಹಸನು ಮಾಡತೊಡಗಿದಳು. ಹೋಗುವಾಗ ಬರುವಾಗ ದಾರಿಯಲ್ಲಿ ಬಿದ್ದ ಸಗಣಿಯನ್ನು ಬಿದಿರು ಬುಟ್ಟಿಯಲ್ಲಿ ತುಂಬಿ ತಂದು ಹೊಲಕ್ಕೆ ಹಾಕಿದಳು. ಗುರುತಿನವರ ಮನೆಯಲ್ಲಿ ಬೂದಿಯನ್ನು ಬೇಡಿ ತಂದಳು. ಈ ಸತತ ದುಡಿತದಿಂದ ಬೇಸತ್ತ ಮಗ ಮಾನಿಂಗ –

‘ಆ ಕಲ್ಲು ಭೂಮ್ಯಾಗ ದುಡಿಯಾಕ ಹೋಗುದ್ರರಿಂದ ಸರಿಯಾಗಿ ಕೂಲಿ ಕೆಲ್ಸಾನೂ ಆಗವಲ್ದು. ಕೂಲಿ ತರೂದು ಕಡ್ಮಿ ಆಗೇತಿ ಮನ್ಯಾಗ ಒಂದಿದ್ದರ ಒಂದು ಇರೂದಿಲ್ಲ’ ಎಂದು ಸಿಡಿಮಿಡಿಗೊಂಡ. ಆದರೂ ಗಂಗವ್ವ ಇನ್ನಿಲ್ಲದ ಸಮಾಧಾನದಿಂದ,

ಮಾನಿಂಗಾ ಈಗ ನಾವೆಲ್ಲರೂ ಕಷ್ಟಾಪಟ್ಟು ದುಡದರ ನಿನಗ ನಿನ್ನ ಮಕ್ಕಳಿಗೆ ಊಟಕ್ಕ ಒಂದು ದಾರಿ ಅಕೈತಿ. ಬೆಳಗಾದ್ರ ನೀನು ಕೂಲಿ ಹೋಗುದು ತಪ್ಪತೈತಿ. ಬ್ಯಾಸರ ಮಾಡಿಕೋಬ್ಯಾಡ ಎಂದು ಹೇಳಿ ರಾತ್ರಿ ಕಾಳಜಿಯಿಂದ ಮನೀಗಿ ಬಾ ಹುಳಾಹುಪ್ಪಡಿ ಇರ್ತಾವು ಎಂದು ಹೇಳಿ ಮನೆಯ ದಾರಿ ಹಿಡಿದಳು.

ಗಂಗವ್ವ ಈ ವರ್ಷವೂ ಬೇಸರ ಮಾಡದೇ ಹೊಲವನ್ನು ಹಸನು ಮಾಡಿದಳು. ಕಲ್ಲು ತೆಗೆದು ಹೊಲದ ಬದುವಿನಲ್ಲಿ ಮೊಣಕಾಲು ಎತ್ತರದ ಒಡ್ಡು ಸಿದ್ದವಾಯಿತು. ಗಂಗವ್ವ ಧನ್ಯತೆಯಿಂದ ಹೊಲದ ತುಂಬ ಅಡ್ಡಾಡಿದಳು ಬನ್ನೀಗಿಡದ ಬುಡದಲ್ಲಿ ಕುಳಿತವಳಿಗೆ ನಾಳೆ ತಾನು ಸತ್ತರೆ ನನ್ನನ್ನು ಈ ಬನ್ನಿಗಿಡದ ಬುಡದಲ್ಲಿಯೇ ಮಣ್ಣು

ಮಾಡು ಎಂದು ಮಾನಿಂಗನಿಗೆ ಹೇಳಬೇಕು ಎಂದೂ ಯೋಚಿಸಿದಳು.

ಆ ವರ್ಷ ಚೆನ್ನಾಗಿ ಮಳೆ ಬಂತು. ಗಂಗವ್ವ ಬಾಡಿಗೆ ಗಳೇ ತಂದು ತನ್ನ ಹೊಲಕ್ಕೆ ಜೋಳ ಸಜ್ಜಿ ಬಿತ್ತಿದಳು. ಬಿತ್ತಿದ್ದು ಬೆಳೆಯುತ್ತೊ ಇಲ್ಲವೊ ಎಂದು ಹಗಲೆಲ್ಲಾ ಹೊಲದಲ್ಲಿಯೇ ಇರುತ್ತಿದ್ದಳು. ಅವಳ ಪಕ್ಕದ ಮನೆಯ ಭೀಮಕ್ಕನೂ ಇವಳ ಪಕ್ಕದಲ್ಲಿಯೇ ಆ ಸರಕಾರಿ ಜಮೀನನ್ನು ಖರೀದಿಸಿದ್ದಳು. ಅದನ್ನು ಹಸನು ಮಾಡಲಾರದೇ ಮನೆಯಲ್ಲಿ ಸಾಕಿರುವ ಆಡು ದನ ಮೇಯಿಸಲು ಬಿಟ್ಟಿದ್ದಳು. ದನ ಮೇಯಿಸಲು ಬಂದ ಭೀಮಕ್ಕ ಅಕ್ಕರೆಯಿಂದ ಕೇಳಿದಳು 'ಎನಬೇ ಗಂಗವ್ವಕ್ಕಾ ಹೊಲಾ ಮಾಡಿದಿ ಮನೀನ ಮರ್‍ತುಬಿಟ್ಟಿಯಲ್ಲ ನಮ್ಮವ್ವಾ ಎಷ್ಟೊಂದು ಸೊರಗೀದಿ' ಎಂದು ಅಲವತ್ತುಕೊಂಡಳು.

ಮನ್ಯಾಗ ಏನೈತಿ ಬಿಡ ತಂಗಿ ನನ್ನ ಮೈಯಾಗಿನ ಬೆವರು ಸುರಿಸಿ ಈ ಭೂಮಿಗೆ ಸುರದೀನಿ ಎಂದ ಗಂಗವ್ವನ ಮಾತಿಗೆ ಭೀಮಕ್ಕ ಹೌದೌದು ಎಂದು ಅಡ್ಡಡ್ಡ ತಲೆಯಾಡಿಸಿದಳು.

ಭೂಮಿಗೆ ಗೊಬ್ಬರ ಹಾಕಿದ್ದಕ್ಕೋ ಗಂಗವ್ವನ ಹೊಲದಲ್ಲಿ ಬೆಳೆ ಕಣ್ಣು ಕೋರೈಸುವಂತೆ ಬೆಳೆಯಿತು. ಗಂಗವ್ವನ ಉತ್ಸಾಹ ಮಿತಿಮೀರಿತು. ಎಳ್ಳು ಅಮಾವಾಸ್ಯೆಗೆ ತನ್ನ ಅಕ್ಕಪಕ್ಕದವರನ್ನೆಲ್ಲಾ ಕರೆದು ಎಳ್ಳ ಹೋಳಿಗಿ ಸಜ್ಜಿರೊಟ್ಟಿ ಪುಂಡಿಪಲ್ಯೆ ಜೋಳದ ಬಾನ ಮಾಡಿಕೊಂಡು ಹೊಲಕ ಚರಗ ಚೆಲ್ಲಿದಳು. 'ಹುಲ್ಲುಲ್ಲಿಗೊ ಸುರಂಬಿಳಿಗೊ' ಎಂದು ಹೊಲದ ತುಂಬ ಅಡ್ಡಾಡಿದಳು. ಒಂದು ಕಡೆ ಮೊಮ್ಮಗ ಸದಾಶಿವ ಮಾನಿಂಗನಂತೆ ಗಂಗವ್ವನನ್ನು ನಿರಾಶೆಗೊಳಿಸಲಿಲ್ಲ. ಕ್ಲಾಸಿನಿಂದ ಕ್ಲಾಸಿಗೆ ಸದಾಶಿವ ಒಳ್ಳೆಯ ಮಾರ್ಕು ತೆಗೆಯುತ್ತಿದ್ದ. ಆತನೂ ಹೊಲಕ್ಕೆ ಬರುತ್ತೇನಂದರೆ ನೀನು ಕಲಿತು ದೊಡ್ಡ ಸಾಹೇಬನಾಗಬೇಕು, ನಾವೆಲ್ಲಾ ಹೊಲಾ ನೋಡಿಕೊಂತೇವಿ ಎಂದು ಹೇಳುತ್ತಿದ್ದಳು. ಸದಾಶಿವ ಮೆಟ್ರಿಕ್ ಪರೀಕ್ಷೆಯಲ್ಲಿ ಫಸ್ಟ್‌ಕ್ಲಾಸಿನಲ್ಲಿ ಪಾಸಾದ. ರಾಶಿಯ ದಿನವೂ ಬಂತು.

ಜೋಳದ ಗುಡ್ಡೆಯನ್ನು ನೋಡಿದ ಗಂಗವ್ವನ ಕಣ್ಣಳಲ್ಲಿ ಆನಂದಬಾಷ್ಪ ಉದುರಿತು. 'ನನ್ನವ್ವ ಭೂತಾಯಿ ನಿನ್ನ ನಂಬಿನಿ ನನ್ನ ಸಂಸಾರಾನ ಕೈ ಬಿಡಬೇಡ' ಎಂದು ಅವಳ ಮನ ಮೂಕವಾಗಿ ಬೇಡಿಕೊಂಡಿತು. ವರ್ಷಕ್ಕಾಗುವಷ್ಟು ಕಾಳು ಜೋಳ ಮನೆ ತುಂಬಿತು. ಸದಾಶಿವನ ಮಾಸ್ತರು ಗಂಗವ್ವನನ್ನು ಕರೆಸಿ ಅವನನ್ನು ಮುಂದೆ ಓದಿಸಲು ತಿಳಿಸಿದರು. ಸ್ಕಾಲರ್‌ಶಿಪ್ ಕೊಡಿಸುವ ಭರವಸೆಯನ್ನು ನೀಡಿದರು.

ಒಂದು ದಿನ ಗಂಗವ್ವ ಹೊಲದಲ್ಲಿದ್ದಾಗ ಸದಾಶಿವ ಓಡೋಡಿ ಬಂದ. ಅಜ್ಜೀ 'ಒಂದು ಅಫಿಡೇವಟ್ಟ್ ಮಾಡಬೇಕಾಗೈತಿ' ಎಂದ. ಹೋಗಿ ನಿಮ್ಮವ್ವನ ಕರಕೊಂಡು ಬಾರೊ ಎಂದಳು ಗಂಗವ್ವ, ಅಜ್ಜೀ ಇವತ್ತ ಒಂದು ದಿನ ಟಾಯಿಮ ಐತಿ ಅವ್ವನ್ನ ಕರಕೊಂಡು ಬರೂದ್ರಾಗ ಕೋರ್ಟ್ ಬಂದಾಗತೈತಿ, ನನ್ನ ಸಾಲಿ ಕಲಿಯೊದು ಮುಗದ್ಹಂಗನ ಎಂದ ಸದಾಶಿವನ ಕಣ್ಣಲ್ಲಿ ನೀರು ಹನಿಯಿತು. ಗಂಗವ್ವ ಹಿಂದು ಮುಂದು ವಿಚಾರ ಮಾಡಲಿಲ್ಲ. ಮಗಳು ವಿಧವೆಯಾದದ್ದರಿಂದ ಮೂಗುತಿ ಕುಂಕುಮ ಎಲ್ಲವನ್ನು ತೆಗೆದು ಮೊಮ್ಮಗನೊಡನೆ ಹೋಗಿ ಅಫಿಡೇವಿಟ್ಟ ಮಾಡಿ ಬಂದಳು. ಎಂದೂ ಹೆಂಡತಿಯ ಕೆಲಸಕ್ಕೆ ಅಡ್ಡ ಬಾರದ ಬಸಪ್ಪನಿಗೂ ಇದು ಸರಿ ಬರಲಿಲ್ಲ. ಆತ ಸಿಡಿಮಿಡಿಗೊಂಡ. ಮುಂದೆ ಸ್ವಲ್ಪ ದಿನಗಳಲ್ಲೇ ಅನಾರೋಗ್ಯದಿಂದ ಮಲಗಿದ ಬಸಪ್ಪ ಕಾಕತಾಳೀಯವೆಂಬಂತೆ ಶಿವನ ಪಾದ ಸೇರಿಕೊಂಡ. ಗಂಗವ್ವ ನಿಜವಾಗಿಯೂ ವಿಧವೆಯಾದಳು.

ಮುಂದೆ ನಾಲ್ಕು ವರ್ಷ ಕಳೆದು ಸದಾಶಿವನ ಓದು ಮುಗಿಯಿತು. ರೈಲ್ವೆಯಲ್ಲಿ ದೊಡ್ಡ ಕೆಲಸವೂ ಸಿಕ್ಕಿ ಅನುಕೂಲಸ್ಥರ ಮಗಳನ್ನು ಮದುವೆಯಾದ. ಗಂಗವ್ವ ತಾನು ಸಾಕಿದ ಕೂಸು ದೊಡ್ಡ ಸಾಹೇಬನಾದದ್ದು ಕಂಡು ಅವಳಿಗೆ ತುಂಬ ಸಂತಸವಾಯಿತು. ಹೊಲದಲ್ಲಿ ಕಾಳು ಬರುತ್ತಿದ್ದುದರಿಂದ ಗಂಗವ್ವ ತುಂಬ ನೆಮ್ಮದಿಯಿಂದ ಇದ್ದಳು. ಆದರೆ ಆ ನೆಮ್ಮದಿ ಬಹಳ ದಿನ ಉಳಿಯಲಿಲ್ಲ.

ತಾಯಿಯ ಮಾತನ್ನು ಮಾನಿಂಗ ಎಂದೂ ಮೀರಿರಲಿಲ್ಲ. ಮನೆಗೆ ಈಗೀಗ ಹೊತ್ತಲ್ಲದ ಹೊತ್ತಲ್ಲಿ ಬರತೊಡಗಿದ. ಏನು ಹೇಳಿದರೂ ಅಪಾರ್ಥ ಮಾಡತೊಡಗಿದ. ಗಂಗವ್ವನ ಕಿವಿಗೆ ಬಿದ್ದ ಹರಕು ಮುರುಕು ಸುದ್ದಿ ನಿಜವಾಗಿತ್ತು. ಗೌಡರ ಹತ್ತಿರ ಸಾಲ ಮಾಡಿದ ಮಾನಿಂಗ ಇಸ್ಪೀಟು ಕುಡಿತ ಕಲಿತಿದ್ದ. ನಾಲ್ಕು ಜನ ಹಿರಿಯರಿಂದ ಬುದ್ಧಿ ಹೇಳಿಸಿದರೂ ಏನೂ ಉಪಯೋಗವಾಗಲಿಲ್ಲ. ಮನೆಯಲ್ಲಿ ಒಂದೊಂದೇ ಸಾಮಾನು ಕಾಣೆಯಾಗತೊಡಗಿದವು.

ಗಂಗವ್ವ ಸೊಸೆ ಮಾಂತವ್ವನೊಡನೆ ಮಾನಿಂಗನನ್ನು ದಾರಿಗೆ ತರುವ ವಿಚಾರವಾಗಿ ಮಾತಾಡಿ ಸೋತಳು.

ಯಾವುದು ಆಗಬಾರದೆಂದು ಗಂಗವ್ವ ದಿನವೂ ದೇವರಿಗೆ ಹರಕೆ ಕಟ್ಟುತ್ತಿದ್ದಳೊ ಆ ದಿನ ಬಂದೇ ಬಿಟ್ಟಿತು. ಗೌಡರು ನೋಟಿಸು ಕೊಟ್ಟಿದ್ದರು. ಹಣ ತುಂಬದಿದ್ದರೆ ಹೊಲ ಲಿಲಾವು ಮಾಡುವುದಾಗಿ ತಿಳಿಸಿದ್ದರು. ಗಂಗವ್ವ ಗೌಡರ ಕಾಲು ಹಿಡಿದು ಕಲ್ಲೂ ಕರಗುವಂತೆ ಪರಿಪರಿಯಿಂದ ಬೇಡಿಕೊಂಡಳು. ನನ್ನ ಮಗ ಶೆಗಣಿ ತಿನ್ನು ಕೆಲಸಾ ಮಾಡ್ಯಾನ ನೀವ ನನ್ನ ತಾಯಿ ತಂದಿ ಅಂತ ತಿಳಕೊಂತೇನಿ, ಹೊಟ್ಯಾಗ ಹಾಕ್ಕೋರಿ ಬೆಳೆದ ಕಾಳೆಲ್ಲಾ ತಂದು ನಿಮ್ಮ ಮನೀಗೆ ತಂದು ಸುರಿತೇನಿ, ನಿಮ್ಮ ಸಾಲಾ ತೀರಸತೇನಿ ಎಂದು ಅಂಗಲಾಚಿದಳು.

ಗೌಡರ ಕಣ್ಣು ಆ ಹೊಲದ ಮೇಲೆ ಬಿದ್ದು ಬಹಳ ದಿವಸವಾಗಿತ್ತು. ಇಂಥಾ ಸುಸಂದರ್ಭವನ್ನು ಅವರು ಕಳೆದುಕೊಂಡಾರೆ? ತಮ್ಮ ಮಗ್ಗುಲಲ್ಲಿಯೇ ಬಂಗಾರದ ಬೆಳೆ ಬೆಳೆಯುತ್ತಿದ್ದ ಗಂಗವ್ವ ಈ ಸಮಯ ಬಿಟ್ಟರೆ ಇನ್ನೆಂದೂ ತಮ್ಮ ವಜ್ರ ಮುಷ್ಟಿಗೆ ಸಿಲುಕಲಾರಳೆಂದು ತಿಳಿದಿದ್ದ ಗೌಡರು ಒಂದೇ ಮಾತು ಹೇಳಿದರು ''ಹಣ ಕಟ್ಟು, ಹೊಲಾ ಬಿಡತೀನಿ''.

ಆದ್ದರಿಂದ ಅವತ್ತು ಬೆಳಗಿನ ಬಸ್ಸಿಗೆ ಐವತ್ತು ರೂಪಾಯಿ ಹೊಂದಿಸಿಕೊಂಡು ಬೆಳಗಾವಿಯ ಬಸ್ಸು ಹತ್ತಿದ್ದಳು. ಮೊಮ್ಮಗ ಸದಾಶಿವ ತನಗೆ ಸಹಾಯ ಮಾಡಬಹುದೆ?

ದೇವರೆ ಸದಾಶಿವನಿಗೆ ತನಗೆ ಸಹಾಯ ಮಾಡುವಂಥ ಮನಸು ಕೊಡು ಎಂದು ಬೇಡಿದಳು. ಅಷ್ಟರಲ್ಲಿ ಬೆಳಗಾವಿ ಬಂತು ಎಂದು ಯಾರೊ ಹೇಳಿದ್ದರಿಂದ ತನ್ನ ಪುಟ್ಟ ಗಂಟು ತೆಗೆದುಕೊಂಡು ಕೆಳಗಿಳಿದಳು.

ಬೆಳಗಾವಿಯಲ್ಲಿ ಸದಾಶಿವನ ಮನೆ ಹುಡುಕುವುದೇನು ಕಷ್ಟವಾಗಲಿಲ್ಲ. ಸದಾಶಿವ ಪಾಟೀಲ ಎಂದು ಕೇಳುತ್ತಾ ನಾಲ್ಕಾರು ಮನೆ ದಾಟಿದವಳಿಗೆ ಮನೆ ಸಿಕ್ಕಿತು. ಇಪ್ಪತ್ತು ವರುಷದ ಯುವತಿಯೊಬ್ಬಳು ಬಾಗಿಲಿನ ಮುದಿನ ಕಸ ತೆಗೆಯುತ್ತಿದ್ದಳು. ಒಂದು ಸುಂದರವಾದ ಮಗು ಅಲ್ಲಿಯೇ ಆಡುತ್ತಿತ್ತು. ಗಂಗವ್ವ ಸದಾಶಿವ ಅದಾನೇನು ಮನ್ಯಾಗ ಎಂದು ಕೇಳುತ್ತಲೇ ಆ ಯುವತಿ ತನ್ನ ವಡತಿಯನ್ನು ಕರೆದು ತಂದಳು.

ಸುನೀತಾ ಹೊರ ಬಂದಳು. ನಾನು ಬಾಗಲಕೋಟೆ ಹತ್ರ ಹಳ್ಳಿಯಿಂದ ಬಂದೇನಿ ಎಂದು ಅಜ್ಜಿ ಹೇಳುವುದೇ ತಡ ಸುನೀತಾ ಅಜ್ಜಿಯ ಕೈಹಿಡಿದು ಒಳಗೆ ಕರೆದುಕೊಂಡು ಹೋದಳು ಅವಳು ಸದಾಶಿವನಿಂದ ಈ ಅಜ್ಜಿಯ ವರ್ಣನೆಯನ್ನು ದಿನಕ್ಕೆ ಒಂದು ಸಲವಾದರೂ ಕೇಳುತ್ತಿದ್ದಳು. ಈಗ ನಾನು ಈ ಮಟ್ಟಕ್ಕೆ ಬರಬೇಕಾದರೆ ಅಜ್ಜಿಯದೇ ಪುಣ್ಯ ಅನ್ನುತ್ತಿದ್ದ ಸದಾಶಿವನ ಮಾತು ಅವಳ ನೆನಪಿನಲ್ಲಿತ್ತು.

ಸುನೀತಾ ಅಗರ್ಭ ಸಿರಿವಂತರ ಮಗಳಾದರೂ ಗುಣವಂತೆಯಾಗಿದ್ದಳು. ಸದಾಶಿವನ ಗುಣ ನಡತೆಯನ್ನು ಮೆಚ್ಚಿ ಅವರು ಮಗಳನ್ನು ಧಾರೆ ಎರೆದು ಕೊಟ್ಟಿದ್ದರು.

ಗಂಗವ್ವ ಮನೆಯಲ್ಲಿ ಕಾಲಿಟ್ಟಾಗ ಹಜಾರದ ನೆಲ ಫಳಫಳ ಹೊಳೆಯುತ್ತಿತ್ತು. ಮನೆ ತುಂಬ ಚೆಂದದ ಸಾಮಾನುಗಳು ತಾನು ಹಾಲು ಕೊಡುವ ಎಂಜನೀಯರ ಮನೆಯಲ್ಲಿರುವ ಎಲ್ಲ ಸಾಮಾನುಗಳೂ ಅಲ್ಲಿದ್ದವು. ತನ್ನ ಕೈ ತುತ್ತು ತಿಂದ ಸದಾಶಿವ ಈ ಮಟ್ಟಕ್ಕೆ ಏರಿದ್ದಾನೆಯೇ? ಎಂದು ಗಂಗವ್ವ ಹೆಮ್ಮೆಯಿಂದ ಬೀಗಿದಳು.

ಮಗುವಿನ ಹೆಸರೇನು? ಸದಾಶಿವ ಯಾವಾಗ ಬರುತಾನ? ಎಂದು ಗಂಗವ್ವ ಕೇಳುವುದಕ್ಕೂ ಸದಾಶಿವ ಬರುವುದಕ್ಕೂ ಸರಿಹೋಯಿತು.

ಅಜ್ಜಿ ಅವರು ಬಂದೇ ಬಿಟ್ಟರು ಎಂದು ಸುನೀತಾ ಹೊರಗೆ ಹೋದಳು.

ಅಜ್ಜೀ ಯಾವಾಗ ಬಂದೀರಿ? ಎಲ್ಲಾ ಆರಾಮ ಎಂದ ಸದಾಶಿವ ತನ್ನ ಶೂಗಳನ್ನು ಬಿಚ್ಚತೊಡಗಿದ. ಗಂಗವ್ವ ಒಂದು ಕ್ಷಣ ದಿಗಿಲುಬಿದ್ದಳು. ಪೀಚು ಪೀಚಾಗಿದ್ದ ಸದಾಶಿವ ಮೈ ಕೈ ತುಂಬಿಕೊಂಡು ಕೆಂಪು ಕೆಂಪಾಗಿದ್ದ. ಆತ ತೊಟ್ಟಿದ್ದ ಬಟ್ಟೆಗಳು ಮತ್ತೊಮ್ಮೆ ಅವಳಿಗೆ ತಾನು ಹಾಲು ಹಾಕವ ಇಂಜಿನೀಯರನ ನೆನಪು ತಂದವು.

ಮಾಮಾ ಹ್ಯಾಗಿದ್ದಾನ ಎನ್ನುವ ಸದಾಶಿವನ ಮಾತಿಗೆ ಗಂಗವ್ವನಿಗೆ ಅಳುವೇ ಬಂತು. ಎಲ್ಲವನ್ನು ವಿವರಿಸಿದಳು. ಈಗ ನೀನು ನನಗೆ ನಾಲ್ಕು ಸಾವಿರ ರೂಪಾಯಿ ಕೊಡದಿದ್ದರೆ ಮತ್ತೆ ನನ್ನ ಸಂಸಾರ ಬೀದಿ ಪಾಲಾಗ್ತೈತಿ ಸದಾಶಿವ ಎಂದೆಂದಿಗೂ ದುಡದ ತಿನಬೇಕಾಗತೈತಿ ಅಂಥಾ ಒಂದು ಹೊಲಾ ಮಾಡುವ ಶಕ್ತಿ ನನ್ನಲ್ಲಿ ಉಳಿದಿಲ್ಲ. ವರ್ಷಾ

ವರ್ಷಾ ಕಾಳು ಮಾರಿ ಬಂದ ದುಡ್ಡಿನ್ಯಾಗ ನಿನ್ನ ಸಾಲಾ ತೀರಸ್ತೇನಿ, ನಾವು ಕೂಲಿ ನಾಲಿ ಮಾಡಿ ಹೊಟ್ಟಿ ತುಂಬಿಕೊಳ್ತೀವಿ ಎಂದ ಗಂಗವ್ವನ ಕಣ್ಣಿಂದ ನೀರು ಧಾರಾಕಾರವಾಗಿ ಹರಿಯಿತು. 'ಅಜ್ಜಿ ವಿಚಾರ ಮಾಡೋಣ ಈಗ ಊಟಾ ಮಾಡಿ ಆರಾಮ ಮಲಗ್ರಿ' ಎಂದ.

ಊಟಕ್ಕೆ ಒಲ್ಲೆನೆಂದ ಗಂಗವ್ವನನ್ನು ಸ್ವತಃ ಸದಾಶಿವ ಕೈ ಹಿಡಿದು ಟೇಬಲ್ಲಿಗೆ ಕರೆತಂದ. ಎಷ್ಟೊಂದು ತಿನಿಸುಗಳು ಎಷ್ಟು ತರಹದ ಪಲ್ಯಗಳು ಹಣ್ಣು ಸ್ವೀಟು ಗಂಗವ್ವನಿಗೆ ಒಂದು ತುತ್ತೂ ಗಂಟಲಲ್ಲಿ ಇಳಿಯಲಿಲ್ಲ. ಅಲ್ಲಿ ತನ್ನ ಮೊಮ್ಮಕ್ಕಳು ಚಟ್ನಿ ರೊಟ್ಟಿಗಾಗಿ ಪರದಾಡುತ್ತಿರುವ ದೃಶ್ಯ ಅವಳ ಕಣ್ಮುಂದೆ ಕಟ್ಟಿತ್ತು.

ಗಂಗವ್ವನಿಗೆ ಬೆಳತನಕ ಕಣ್ಣಿಗೆ ಕಣ್ಣು ಹತ್ತಲಿಲ್ಲ. ಅವಳು ಗೌಡರು ತನ್ನ ಹೊಲವನ್ನು ಕಿತ್ತುಕೊಂಡಂತೆ ಕನಸು ಕಂಡು ಬೆಚ್ಚಿ ಬಿದ್ದಳು.

ಇತ್ತ ಸದಾಶಿವನು ಒಂದು ಸಂಧಿಗ್ದದಲ್ಲಿ ಬಿದ್ದಿದ್ದ. ಅವನು ಒಂದು ಹೊಸ ಮನೆ ಕಟ್ಟಿಸುತ್ತಿದ್ದ. ಬ್ಯಾಂಕಿನಲ್ಲಿ ಲೋನು ತೆಗೆದಿದ್ದ. ಅವರಿವರ ಹತ್ತಿರ ಕೈ ಸಾಲ ತೆಗೆದುಕೊಂಡಿದ್ದ ಸುಮಾರು ಐವತ್ತು ಜನ ಸೇರಿ ಒಂದು ಹೊಲ ಖರೀದಿ ಮಾಡಿ ಮನೆ ಕಟ್ಟಿಸುತ್ತಿದ್ದರು. ಈಗ ಅಜ್ಜಿಗೆ ನಾಲ್ಕು ಸಾವಿರ ರೂಪಾಯಿ ಕೊಟ್ಟರೆ ನಾಳೆ ಹಣ ಕಟ್ಟಲು ಆಗುವುದಿಲ್ಲ. ಮನೆ ಕಟ್ಟುವುದು ನಿಂತರೆ ಬ್ಯಾಂಕಿನ ಸಾಲ ಸಿಗುವುದಿಲ್ಲ.

ತನ್ನ ಸಂಬಳ ಮನೆಯ ಖರ್ಚಿಗೆ ಸಾಕು, ಆದರೆ ಅದೆ ನಾಲ್ಕು ಸಾವಿರ ರೂಪಾಯಿ ಅಜ್ಜಿಗೆ ಕೊಟ್ಟರೆ ಅವಳ ಸಂಸಾರ ತಲೆಮಾರಿನವರೆಗೂ ಸುಖದಿಂದಿರಬಲ್ಲುದು. ತನ್ನ ಹೊಟ್ಟೆ ಸುಳ್ಳು ಮಾಡಿ ನನ್ನನ್ನು ಸಾಕಿದ ಅಜ್ಜಿಯ ಋಣವನ್ನು ಸ್ವಲ್ಪವಾದರೂ ತೀರಿಸಬಹುದು ಆದರೆ ಹೇಗೆ ?

ಗಂಗವ್ವ ಬೆಳಿಗ್ಗೆ ಎದ್ದು ಹೊರಟು ನಿಂತಾಗ ಸದಾಶಿವ ಬಹಳ ಕಷ್ಟದಿಂದ ಅಜ್ಜೀ ನಾನೂ ಮನೆ ಕಟ್ಟಿಸಾಕಹತ್ತೀನಿ, ಒಟ್ಟು ನಾಕು ಲಕ್ಷ ರೂಪಾಯದ್ದು. ಏನೂ ತಿಳ್ಕೋಬ್ಯಾಡ ಈ ಐದು ನೂರು ರೂಪಾಯಿ ತಗೊ. ಯಾವುದಕ್ಕಾದರೂ ಆದೀತು ಎಂದು ಅಜ್ಜಿ ಕೈಯ್ಯಲ್ಲಿ ಹಣವನ್ನಿಟ್ಟ ಗಂಗವ್ವ ನಿರಾಶೆಯಿಂದ ದುಃಖದಿಂದ ಆ ಹಣವನ್ನೇ ನೋಡಿದಳು. ಈ ಹಣದಿಂದ ತಾನು ಸೊಸೆ ಮೊಮ್ಮಕ್ಕಳು ಕೆಲವು ದಿವ ಆರಾಮವಾಗಿರಬಹುದು. ಆದರೆ ತನ್ನ ಹೊಲವನ್ನು ಬಿಡಿಸಿಕೊಳ್ಳಲಾರೆ. ತನ್ನ ಪ್ರತಿಯೊಂದು ಬೆವರ ಹನಿಯೂ ಆ ಹೊಲದ ಮಣ್ಣಿನಲ್ಲಿಯೇ ಮಣ್ಣಾಗಬೇಕೆಂದು ಬಯಸಿದ್ದಳು. ಹೊಲದ ನಡುವೆ ಇರುವ ಬನ್ನಿಗಿಡದ ಬುಡದಲ್ಲಿ ತನ್ನ ಸಮಾಧಿ ಮಾಡಬೇಕೆಂದು ಬಯಸಿದ್ದಳು. ಇನ್ನು ಈಗ ಆ ಆಶೆ ಮಣ್ಣಾಗಿ ಹೋಗುತ್ತಿರುವಾಗ ಇನ್ನು ತಾನು ತನ್ನ ಸೊಸೆ ಮೊಮ್ಮಕ್ಕಳು ದುಡಿದೇ ತಿನ್ನಬೇಕು ಜೀವನಪರ್ಯಂತ ಕೂಲಿ ಮಾಡಬೇಕು ಎನ್ನುವ ವಿಚಾರ ಬಂದೊಡನೆ ಗಂಗವ್ವನ ಗಂಟಲುಬ್ಬಿ ಬಂದಿತು. ಯಾವ ವಿಚಾರ ಮಾಡಲೂ ಆಸ್ಪದ ಕೊಡದೇ ಗಂಗವ್ವ ಆ ಹಣವನ್ನು ಅಲ್ಲಿಯೇ ನಿಂತಿದ್ದ ಸದಾಶಿವನ ಮಗನ ಕೈಯ್ಯಲ್ಲಿಟ್ಟು 'ಬರ್ತೀನಿ' ಎನ್ನುತ್ತ ಬೀದಿಗಿಳಿದಳು.

ತಾನಿನ್ನು ಮೊದಲಿನಂತೆ ದುಡಿದು ಒಂದು ಅಂತಹ ಹೊಲವನ್ನು ಗಳಿಸಲಾರೆ. ಆದರೆ ಅದನ್ನು ಉಳಿಸಲೂ ಆರೆ. ದೇವರೇ ಇಂತಹ ಪರಿಸ್ಥಿತಿಗಿಂತಲೂ ತನಗೆ ಸಾವನ್ನಾದರೂ ತರಬಾರದೇ ಎಂದು ಗಂಗವ್ವನ ಆತ್ಮ ಹಲುಬಿತು. ದುಡಿದು ದುಡಿದು ದುರ್ಬಲವಾದ ತನ್ನ ಕೈಗಳನ್ನೂ ಶಕ್ತಿಹೀನವಾದ ತನ್ನ ಕಾಲುಗಳನ್ನೂ ಅಸಹಾಯಕತೆಯಿಂದ ನೋಡಿಕೊಂಡಳು.

ಸದಾಶಿವನೂ ಅಸಹಾಯಕತೆಯಿಂದ ದುಃಖದಿಂದ ಹೋಗು ತ್ತಿರುವ ಅಜ್ಜಿಯನ್ನೇ ನೋಡಿದ. ಇನ್ನು ಈ ಜನ್ಮದಲ್ಲಿ ತಾನು ಅಜ್ಜಿಯ ಋಣ ತೀರಿಸಲಾರೆ, ಆ ಐದುನೂರು ರುಪಾಯಿ ಕೊಡ ಬೇಕಾದರೆ ಸದಾಶಿವ ಬೆಳತನಕ ವಿಚಾರ ಮಾಡಿದ್ದ. ತುಂಬಲು ಕಡಿಮೆಯಾದ ಹಣವನ್ನು ಯಾರ ಹತ್ತಿರ ಸಾಲ ಕೇಳಬೇಕು ಎಂದು ಯೋಚಿಸಿದ್ದ. ಆ ಸಮಸ್ಯೆಯನ್ನು ಅಜ್ಜಿ ಬಗೆಹರಿಸಿದ್ದಳು.

ಹೋಗುತ್ತಿರುವ ಅಜ್ಜಿಯ ನೆರಳು ದೊಡ್ಡದಾಗುತ್ತಾ ಹೋದಂತೆ ತಾನು ತೀರ ಕುಬ್ಜನಾದಂತೆ ಭಾಸವಾಗಿ ಸದಾಶಿವ ಅಲ್ಲಿಯೇ ಕುಸಿದ.

●

# ಬಿಡುಗಡೆಗೆ ಒಲ್ಲದ ಕವಿತಾ

ಪುಸ್ತಕ ಬಿಡುಗಡೆಗೆ
ಜಯಂತ ಕಾಯ್ಕಿಣಿ ಬಂದರು
ಕವಿತೆ ಒಲ್ಲದು ಪುಸ್ತಕ ಬಿಡುಗಡೆಗೆ
ಅದು ಪುಸ್ತಕವಲ್ಲ ಕವಿತೆಗೆ ಬಿಡುಗಡೆ
ಎಂದ ಹಾಗೆ

ಇಪ್ಪತ್ತೈದು ಮಕ್ಕಳಿಗೆ ಮಾತು ಕಲಿಸಿ
ಮೌನದಿಂದ ಹೆಸರು ಇರಿಸಿ
ಕವಾಯತು ಸ್ವಾಸ್ಥ್ಯಕ್ಕೆ ನಿಂತ ಶಬ್ದಗಳಿಗೆ
ಬಿಡುಗಡೆಗೆ ನಿಗದಿ ಮಾಡಿದರೂ
ಅಂಗಡಿಯ ಉದಾರಿ ಗಿರಾಕಿಗಳಂತೆ
ಶಾಲೆಗೆ ಹೋಗದ ತುಂಟ ಹುಡುಗ ಮುನಿದಂತೆ
ಬಿಡುಗಡೆಗೆ ಒಲ್ಲದು ಕವಿತೆ
ಎದ್ದ ಬೆಕ್ಕು ಬೆನ್ನ ಬಾಗಿಸಿ ನಿಂತಂತೆ

ಪುಸ್ತಕದ ಗಡಿಗಳ ಮಡಚಿ ಹೋಗದಂತೆ
ಗುಮ್ಮೆಂದು ಗಂ ಹಾಕಿ ಶಬ್ದಗಳ ಹಿಡಿದಿಟ್ಟರೂ
ಕವಿತೆ ಪುಸ್ತಕದ ಹೊರಗೆ ಕತ್ತು ಹಾಕಿ ಹಣಕಿ
ಕವಿಯೆಂದು ಎಣಿಸಿದ ನನ್ನನ್ನೇ ಅಣಕಿ
ಭಾಷೆಯಲ್ಲಿ ತಿಣುಕಿ ಸಂವಹನದಲ್ಲಿ ಕಿಡಕಿ
ತೆಗೆದರೂ

ಪುಸ್ತಕ ಬಿಡುಗಡೆಗೆ ಮೊದಲು
ಬಿಡುಗಡೆಗೊಳಿಸಿ ಕವಿಯಿಂದ ಎಂದು ನನ್ನ
ನನ್ನೊಳಗಿನ ಕವಿಗೆ ಎಂದಿತು ಕವಿತೆ
ಪುಸ್ತಕ ನಿನ್ನದಿರಬಹುದು ಕವಿತೆ ಸಾರ್ವಜನಿಕ
ಶಬ್ದಗಳು ನಿನ್ನದಿರಬಹುದು ಆತ್ಮ ನಿನ್ನದಲ್ಲ
ಭಾಷೆ ನಿನ್ನದಿರಬಹುದು, ಕೊಡುವ ಅರ್ಥ ನಿನ್ನದಲ್ಲ
ರೂಪ ನಿನ್ನದಿರಬಹುದು, ಅನುಭೂತಿ ನಿನ್ನದಲ್ಲ

ಎತ್ತರಕ್ಕೇರಿದರೂ ಜಯಂತ
ಸುತ್ತ ಹುತ್ತ ಬೆಳೆಸದ ಗುಣವಂತ
ಅಹಂ ಎಂದದಕ್ಕೆ ಹೂಂ ಎನ್ನದ ಸದಾ ಧಾವಂತ
ಜಯಂತ ಪುಸ್ತಕ ಬಿಡುಗಡೆಗೆ
ಪೊಟ್ಟಣ ಬಿಚ್ಚಿ ನಿಂತು ನಿಂತಂತೆ ನಿಲುಗಡೆಗೆ
ರಿಬ್ಬನ್ನು ಬಿಡಿಸಿದಷ್ಟೇ ತಡ
ಕತ್ತು ಹೊರಗೆ ಹಾಕಿದ್ದ ಕವಿತೆ
ನನ್ನೆತ್ತರಕ್ಕೆ ಬೆಳೆದು ನಿಂತಿತು
ಕುಳಿತು ಕೊಂಡಿತು ಜನರ ಮಧ್ಯೆ
ಕೈ ಬೀಸಿ ಜಯಂತನಿಗೆ ಕೈ ಮುಗಿದು ನಕ್ಕಿತು
ನನ್ನ ಪುಸ್ತಕವನ್ನು ಬೆಕ್ಕಿನಂತೆ ನೆಕ್ಕಿತು

ಜಯಂತ ಎಂದರು
ಕವಿತೆ ಬಿಡುಗಡೆ ಗೊಂಡಿದೆ ಕವಿಯಿಂದ ಆದರೆ
ಕವಿ ಬಿಟ್ಟನೇ, ಕವಿತೆಯ ಪ್ರೀತಿಯಿಂದ ಬಿಡುಗಡೆ ?
ಜಯಂತ ನಿಂತ ಬದಿಯಲ್ಲಿ ಕವಿತೆ ನಿಂತಿತು ಸಂಗಡ
ಕವಿತೆ ನನಗಿಂತ ಎತ್ತರ

ನನಗೋ
ಧನ್ಯಭಾವ ಜಯಂತನಿಗೆ ಅವನೊಳಗಿನ ಕವಿಗೆ
ಬಿಡುಗಡೆಗೊಂಡ ಕವಿತೆಗೂ

✍ ವಿ. ಎಸ್. ಶ್ಯಾನ್‌ಭಾಗ್

# ಸ್ತ್ರೀ ಸಂವೇದನೆ

‘ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪೀಗರೀಯಸೀ' ಎಂದು ಎಷ್ಟೇ ಅಲಂಕಾರಿಕ ಉಪಮೆಗಳನ್ನು ಕೊಟ್ಟು ಹೆಣ್ಣಿನ ವ್ಯಕ್ತಿತ್ವವನ್ನು ಎತ್ತಿಹಿಡಿದು ಜಗತ್ತಿನ ಎದುರು ಸ್ತ್ರೀಗೆ ಪೂಜ್ಯ ಭಾವನೆಯನ್ನು ಕೊಟ್ಟಿದ್ದರೂ ಒಳಗಿಣುಕಿನೋಡಿದಾಗ ಸಂಸಾರ ಸೂತ್ರಧಾರಿಣಿ ಹೆಣ್ಣೇ ಆದರೂ ಅದರ ಹೆಗ್ಗಳಿಕೆ ಮಾತ್ರ ಗಂಡಿಗೇ ಸೇರುತ್ತದೆ. ಮನೆಯಲ್ಲಿ ರೊಟ್ಟಿಯ ಹಿಟ್ಟಿನಿಂದ ಹಿಡಿದು ಪಲ್ಯದ ಸೊಪ್ಪಿನವರೆಗೂ ಹೆಣ್ಣಿನದೇ ಕೈವಾಡವಾದರೂ ಅದರ ರುಚಿ-ಶುಚಿಗಳ ಬಗ್ಗೆ ವಿಮರ್ಶೆ ಮಾಡುವ ಹಕ್ಕು ಗಂಡಿನದೇ.. ಯಾವುದೋ ಅನಿವಾರ್ಯತೆಯಿಂದ ಅಡುಗೆಯೇನಾದರೂ ಕೊಂಚ ಎಡವಟ್ಟಾಗಿದ್ದರೆ ಅವಳನ್ನು ಎಲ್ಲರೆದುರು ಹೀನೈಸಿ ಮನಸ್ಸಿಗೆ ಕ್ಷೋಭೆಯುಂಟುಮಾಡುವುದೂ, ಕೆಲವೆಡೆ ದೈಹಿಕವಾಗಿ ದಂಡಿಸುವುದೂ ನಮ್ಮ ಗ್ರಾಮಾಂತರಗಳಲ್ಲಿ ಸಹಜವೇ ಆಗಿದೆ. ಇನ್ನು ಕಲಿತ ನಾಗರೀಕರಾದ ನಗರದವರನ್ನೊಮ್ಮೆ ಅವಲೋಕಿಸಿದಾಗ 'ಅಳಿಯನಲ್ಲ-ಮಗಳ ಗಂಡ' ಎಂಬಂತೆ ಇಲ್ಲಿಯೂ ಹಿಂಸೆಯು ವೈವಿಧ್ಯತೆಯಲ್ಲಿ ಕಾಣಸಿಗುತ್ತದೆ. ಕೆಲವು ಸಂಸಾರಗಳಲ್ಲಿ ಪತಿಯು ಸತಿಗೆ ಸಹಕಾರಿಯಾಗಿ ಪತ್ನಿಯ ಸದಭಿರುಚಿಗೆ ಪೋಷಕವಾಗಿರುವುದು ಕೇವಲ ಬೆರಳೆಣಿಕೆಯಷ್ಟು ಮಾತ್ರ. ಬಹುತೇಕ ಸಂಸಾರದಲ್ಲಿ ವಿದ್ಯೆ, ಬುದ್ಧಿ, ವ್ಯವಹಾರಗಳಲ್ಲಿ ತನಗಿಂತ ಮುಂದಿರುವ ಮಹಿಳೆಯನ್ನು ಇಲ್ಲ ಸಲ್ಲದ ಅಪವಾದಗಳನ್ನು ಹೇರಿ ಹಿಂದಕ್ಕೆಳೆಯುವುದೇ ಮಾಮೂಲಾಗಿದೆ. ಇದಕ್ಕೆ ಪುರುಷಪ್ರಧಾನ ಸಮಾಜದ ರೂಢಿಗಳೇ ಕಾರಣವೆಂಬುದರಲ್ಲಿ ಸಂಶಯವಿಲ್ಲ. ಇನ್ನಾದರೂ ವಿಚಾರಶೀಲರಾದ ಪುರುಷ ಸಮಾಜವು ಎಚ್ಚೆತ್ತುಕೊಂಡು ಹೆಣ್ಣಿನ ಸ್ಥಾನ ಅಡುಗೆ ಮನೆಗೂ, ಶಯ್ಯಾಗೃಹಕ್ಕಷ್ಟೇ ಮೀಸಲೆಂಬ ಭಾವನೆಯ ಸುಳಿಯಿಂದ ಹೊರಬಂದು ತನ್ನಷ್ಟೇ ಸಮರ್ಥಶಾಲಿಯಾದ, ಕೆಲವೊಮ್ಮೆ ತನಗಿಂತಲೂ ಮಿಗಿಲಾದ ವ್ಯಕ್ತಿತ್ವವುಳ್ಳವಳೆಂದು ಬಿಂಬಿಸಲು ಅನುವು ಮಾಡಿಕೊಡುವುದು ಸೂಕ್ತ.

**✍ ಎಂ. ಪುಟ್ಟತಾಯಮ್ಮ, ಗುಂಡ್ಲುಪೇಟೆ**

ನಮ್ಮ ಹೆಂಗಸರ ಶೋಷಣೆಗೆ ಕಾರಣವೆಂದರೆ ಮೊದಲಿಗೆ ನಮ್ಮಲ್ಲಿ ರಕ್ತಗತವಾಗಿ ಹಬ್ಬಿಕೊಂಡಿರುವ ಮೌಢ್ಯ. ತಮ್ಮ ನೋವನ್ನು ಯಾರಿಗೂ ಹೇಳಿಕೊಳ್ಳಬಾರದು, ಸಂಸಾರವೆಂಬುದು ಗುಟ್ಟಾಗಿರಬೇಕು. ಅದರ ಒಡಕನ್ನು ರಟ್ಟು ಮಾಡಬಾರದು, ಗಂಡನ ತಪ್ಪನ್ನು ಎತ್ತಿ ತೋರಿಸಬಾರದು. ಆತನ ದಬ್ಬಾಳಿಕೆಯನ್ನು ಬಾಯ್ಮುಚ್ಚಿಸಹಿಸಿಕೊಳ್ಳಬೇಕು, ಆತ ಎಲ್ಲಿ ಹೋದರೂ, ಎಷ್ಟು ಹೊತ್ತಿಗೆ ಬಂದರೂ, ಯಾರನ್ನು ಕರೆತಂದರೂ ಕೇಳುವ ಹಕ್ಕಿಲ್ಲ, ಹೊರಗಡೆಯಿಂದ ಬರುವ ಗಂಡಸಿಗೆ ತನ್ನ ಕಷ್ಟಗಳನ್ನು ತೋರ್ಪಡಿಸಿಕೊಳ್ಳದೆ ಎಲ್ಲವನ್ನೂ ಮನದಾಳದಲ್ಲಿ ಹುದುಗಿಸಿ ನಗು ನಗುತ್ತಾ ಸ್ವಾಗತಿಸಬೇಕು.

ಗಂಡ ಹೊರಗಡೆ ಹೊರಟಾಗ ‘ಎಲ್ಲಿಗೆ?’ ಎಂದು ಕೇಳುವ ತಪ್ಪನ್ನಂತೂ ಮಾಡಲೇಕೂಡದು. ಏಕೆಂದರದು ಅಪಶಕುನ. ಹೊರಗಡೆ ಹಲವಾರು ಅಪಘಾತ, ಅವಘಡಗಳು ಕಾದಿರುತ್ತವೆ. ಆದ್ದರಿಂದ ಹೊರಗಡೆ ಹೊರಟ ಗಂಡಸಿಗೆ ‘ಶುಭ’ವನ್ನು ಹಾರೈಸುತ್ತಾ ತನ್ನ ದುಃಖವನ್ನು ನುಂಗಿಕೊಳ್ಳಬೇಕಾದುದು ಹೆಣ್ಣಿನ ಧರ್ಮವೆಂಬ ಭಾವನೇ ಕಡು ದುಃಖ ಮಾಡಿ ಗೋಳಾಡಿದರೆ ‘ಗಂಡ’ ನಿಗೆಲ್ಲಿ ಅದು ತಟ್ಟಿ ಅನಾಹುತವಾಗುವುದೋ....?

ಇದಲ್ಲದೆ ಇನ್ನು ಹಬ್ಬ-ಹುಣ್ಣಿಮೆಗಳು, ವ್ರತ-ನೇಮಗಳು, ಇವಂತೂ ಕೇವಲ ಹೆಣ್ಣಿಗೆ ಮಾತ್ರವೇ ಮೀಸಲಿಟ್ಟ ಸಂಪ್ರದಾಯಗಳು. ಹೆಣ್ಣು ಶ್ರದ್ಧೆಯಿಂದ, ಆಸಕ್ತಿಯಿಂದ ಮನೆಮಠಗಳನೆಲ್ಲ ಸ್ವಚ್ಛಮಾಡಿ ಈಗಿನ ನೀರಿನ ತುಟ್ಟಿಯ ಕಾಲದಲ್ಲೂ ನೀರನ್ನು ಸಂಗ್ರಹಿಸಿ ಮನೆ ಮಂದಿಗೆಲ್ಲ ಸ್ನಾನಕ್ಕಣಿ ಮಾಡಿಟ್ಟರೂ ಸಕಾಲದಲ್ಲಿ ಸಹಕರಿಸಿ, ಅವಳ ಮನೋಭಿಲಾಷೆಗೆ ತಕ್ಕಂತೆ ವ್ಯವಹರಿಸುವ ಸೌಜನ್ಯ ಇಂದಿಗೂ ಬಹುತೇಕ ಕುಟುಂಬಗಳಲ್ಲಿಲ್ಲ. ಬೆಳಗಿನಿಂದ ಉಪವಾಸವಿದ್ದು ಗಂಡ-ಮಕ್ಕಳ ಶ್ರೇಯಸ್ಸನ್ನು ಬಯಸುವ ಜೀವಿಗೆ ದೊರೆಯುವುದು ಕೆಲವೊಮ್ಮೆ ತಿರಸ್ಕಾರ !

ಈ ಪದ್ದತಿಗಳಿಂದ ಹಲವಾರು ಅನಾಹುತಗಳಾಗುವುದು ಖಂಡಿತ. ಮನೆಯೊಳಗೇ ಬಚ್ಚಿಟ್ಟುಕೊಂಡು ಹೊರಗಿನ ವ್ಯವಹಾರವನ್ನೇ ಅರಿಯದ ಈ ಮುಗುದೆ ಮುತ್ತೈದೆಗೆ ಆಗುವ ಅನ್ಯಾಯಗಳು ಒಂದೆರಡಲ್ಲ. ಬೆಳಿಗ್ಗೆ ಮನೆಬಿಟ್ಟ ಗಂಡ ಎಲ್ಲಿ ಹೋದ....? ಏನು ಮಾಡಿದ....? ಅವನ ವರಮಾನವೆಷ್ಟು.....? ಮಾಡುತ್ತಿರುವ ಖರ್ಚೆಷ್ಟು...? ದುಂದು ಮಾಡಿ ಸಾಲಗಾರನಾಗಿರುವನೇ....? ಮದ್ಯವ್ಯಸನಿಯಾಗಿರುವನೇ.....? ಬೇರೊಬ್ಬಳ ಆಕರ್ಷಣೆಯಿಂದ ಮನೆಯಲ್ಲಿ ಥಳಕು ಬಳುಕುಗಳನ್ನೇ ಕಾಣದೆ ಹಗಲಿರುಳೂ ಗಾಣದೆತ್ತಿನಂತೆ ದುಡಿಯುವ ಹೆಂಡತಿಯನ್ನು ಆ ಸೋಗಲಾಡಿಗೆ ಹೋಲಿಸಿಕೊಂಡು ಹೆಂಡತಿಯ ಬಗ್ಗೆ ಕೀಳರಿಮೆ ಬೆಳಸಿಕೊಂಡು ಮೂರು ಹೊತ್ತು ಅವಳನ್ನು ಹಂಗಿಸುತ್ತಿರುವನೇ....? ಇವೆಲ್ಲವೂ ನಿಲ್ಲಬೇಕು. ನಿಲ್ಲಬೇಕಾದರೆ ಹೆಣ್ಣಿನ ಮೌಢ್ಯತೆ ಕಡಿಮೆಯಾಗಿ ದಾಷ್ಟಿಕತೆ ಹೆಚ್ಚಾಗಬೇಕು. ಹೆಂಡತಿಯ ಪ್ರತಿಕ್ಷಣದ ಬದುಕಿನ ಅರಿವು ಗಂಡನಿಗಿದ್ದಂತೆ, ಗಂಡನ ದಿನನಿತ್ಯದ ವ್ಯವಹಾರ, ಆದಾಯ, ವೆಚ್ಚಗಳ ಪರಿಪೂರ್ಣ ಅರಿವು ಹೆಂಡತಿಗೂ ಇರಬೇಕು. ಆಯಾ ದಿನದ ಕಾರ್ಯಕ್ರಮಗಳನ್ನು ಇಬ್ಬರೂ ಜತೆಯಾಗಿ ಕುಳಿತು ಚರ್ಚಿಸುವ ಸೌಜನ್ಯ ತೋರಬೇಕು.

ತಾನು ಎಲ್ಲೆಲ್ಲಿಗೋ, ಯಾರ‍್ಯಾರ ಜತೆಯಲ್ಲೋ ತಿರುಗಿ ಬರುವ ಗಂಡಸು, ಹೆಂಗಸಿನ ಅಭಿಪ್ರಾಯಕ್ಕೆ ಮನ್ನಣೆಯಿತ್ತು, ಕೊಂಚ ಬಿಡುವು ಮಾಡಿಕೊಂಡು ಅವಳ ಕಾರ್ಯಕ್ರಮಗಳಿಗೆ ಸ್ಪಂದಿಸಬೇಕು. ಹೆಣ್ಣು ಕೂಪ ಮಂಡೂಕವಾಗದಂತೆ ಆಕೆಗೆ ಹೊರಜಗತ್ತಿನ ಪರಿಚಯ ಮಾಡಿಕೊಳ್ಳಲು ಸಹಕರಿಸಬೇಕು. ಹೊರಗಿನ ಪರಿಸರಕ್ಕೆ ಹೊಂದಿಕೊಳ್ಳುವಂತೆ ಪ್ರೋತ್ಸಾಹಿಸಬೇಕು. ಹೆಣ್ಣು ಗಂಡಿಗಿಂತ ಸೂಕ್ಷ್ಮಗ್ರಾಹಿ. ಆವಕಾಶ ಸಿಕ್ಕರೆ ಗಂಡನ್ನೂ ಮೀರಿಸಬಲ್ಲಳೆಂಬ ಸುಳಿವು ದೊರೆತೊಡನೆಯೇ ಅವಳನ್ನು ಆಘಾತಿಸಿ ಮನೆಯಲ್ಲಿ ಕೂಡಿಹಾಕಲೆತ್ನಿಸುವುದು ಅಕ್ಷಮ್ಯ. ಅದು ನಿಲ್ಲಬೇಕು.

ಇದನ್ನೆಲ್ಲಾ ಗೆದ್ದು ಹೆಣ್ಣು ಹೊರಬರಬೇಕಾದರೆ ಮೌಢ್ಯತೆಯನ್ನು ತೊರೆಯಬೇಕು. ಈ ಮೌಢ್ಯತೆಯೂ ಅನಕ್ಷರತೆಯೂ ಒಂದೇ ನಾಣ್ಯದ ಎರಡು ಮುಖಗಳು. ಎಲ್ಲಿ ಅನಕ್ಷರತೆಯಿದೆಯೋ ಅಲ್ಲಿ ಮೌಢ್ಯತೆಯಿರುತ್ತದೆ. ಹೆಣ್ಣು ಅಕ್ಷರಸ್ಥಳಾದಾಗ ಮಾತ್ರ ಮೌಢ್ಯತೆಯಿಂದ ಹೊರಬರಬಲ್ಲಳು. ಆದರೆ ನಮ್ಮ ಹಳ್ಳಿಗಾಡಿನ ಸಮಾಜದಲ್ಲಿ ಹೆಣ್ಣು ಹುಟ್ಟುತ್ತಿದ್ದಂತೆಯೇ ಹಲವಾರು ಬೇಡಿಗಳು ಆಕೆಯನ್ನು ಬಂಧಿಸಲು ಸಿದ್ಧವಾಗಿರುತ್ತವೆ. ಚಿಕ್ಕ ಮಗುವಿಗೆ ತೊಡಿಸುವ ಬಳೆ, ಕಾಲ್ಮುರಿಗಳು, ಹೆಣ್ಣು ಬೆಳೆದಂತೆ ಅವಳು ಹೊಸಲುದಾಟದಂತೆ, ಎಲ್ಲೆ ಮೀರದಂತೆ ಲಕ್ಷ್ಮಣ ರೇಖೆಗಳಾಗಿ ಸಂಕೇತಿಸುತ್ತವೆ. ಮೊದಲಿಗೆ ಪ್ರಕೃತಿಯೇ ಹೆಣ್ಣಿಗೆ ಅನ್ಯಾಯ ಮಾಡಿತೇನೋ ಎನಿಸುತ್ತದೆ. ಪ್ರಕೃತಿ ಧರ್ಮದಂತೆ ಪ್ರಬುದ್ಧಳಾದ ಹೆಣ್ಣಿಗೆ ಎಲ್ಲಿಲ್ಲದ ಕಟ್ಟುಪಾಡುಗಳು ಕಾಲ್ತೊಡಕ್ಕಾಗುತ್ತವೆ. ಹೆಣ್ಣಿನ ಶರೀರದ, ಕವಿವರ್ಣನೆಯ ಸೌಕುಮಾರ್ಯ, ಸೌಂದರ್ಯಗಳೇ ಹೆಣ್ಣಿನ ಶತ್ರುಗಳಾಗಿ ಕಾಡತೊಡಗುತ್ತವೆ. ಋತುಮತಿಯಾದ ಹೆಣ್ಣು ತಿಂಗಳು-ತಿಂಗಳು ನಡೆಯುವ ಋತು ಕ್ರಿಯೆಯಿಂದ ಮಾನಸಿಕವಾಗಿಯೂ, ದೈಹಿಕವಾಗಿಯೂ ದುರ್ಬಲಗೊಂಡು ಆಟಪಾಠಗಳಲ್ಲಿ ಆಸಕ್ತಿ ಕಳೆದುಕೊಳ್ಳುವ ಪ್ರಮೇಯವಿರುತ್ತದೆ. ಅದರಲ್ಲಿಯೂ ಈ ಪಿಡುಗು ಇಂದಿನ ವಾತಾವರಣಕ್ಕನುಗುಣವಾಗಿ, ಹಿಂದೆ 18-20 ರ ವಯಸ್ಸಿನ ನಂತರದ ಅವಸ್ಥೆ ಇಂದಿನ ಹೆಣ್ಣುಮಕ್ಕಳಲ್ಲಿ 10-12 ವರ್ಷಕ್ಕೆ ಸೀಮಿತಗೊಂಡಿದ್ದು ಹೆಣ್ಣಿನ ಬಾಲ್ಯವನ್ನೇ ಮೊಟಕುಗೊಳಿಸಿ ಹಲವಾರು ತೊಡಕುಗಳನ್ನು ಆ ಮಗುವಿನ ಕೊರಳಿಗೆ ತೊಡಿಸುವುದನ್ನು ನಾವಿಂದು ಕಾಣುತ್ತೇವೆ. ಹಳ್ಳಿಗಳಲ್ಲಂತೂ ಇದೊಂದು ದೊಡ್ಡ ಸುದ್ದಿಯೇ ಆಗಿ ಆ ಮಗುವಿನ ವಿದ್ಯಾಭ್ಯಾಸಕ್ಕೆ ಕುತ್ತು ಬಂತೆಂದೇ ಅರ್ಥ ! ಇನ್ಯಾಕೆ ಇವಳಿಗೆ ಶಾಲೆ...? ನೆರೆದಾಯ್ತು ... ಯಾವುದಾದರೂ ಗಂಡು ನೋಡಿ ಸಾಲ - ಸೋಲ ಮಾಡಿ ಮದುವೆ ಮಾಡಿ ಬಿಡಿ.....! ಎನ್ನುವ ಹಂತಕ್ಕೆ ಬಂದು ಮುಟ್ಟುತ್ತದೆ. ಏಕೆಂದರೆ ಇಂದಿನ ಸಾಮಾಜಿಕ ಪರಿಸರವೂ ಅಷ್ಟೇ ಕಲುಷಿತಗೊಂಡು ಹೆಣ್ಣು ಒಂಟಿಯಾಗಿ ಸಂಚರಿಸುವುದು ಕಷ್ಟವಾಗಿದೆ. ಇದು ನಮ್ಮ ದೇಶದ ದೊಡ್ಡ ಸಮಸ್ಯೆಯಾಗಿದೆ.

ಹಳ್ಳಿಯ ಪರಿಸರದಲ್ಲಿರಲಿ... ಪಟ್ಟಣದ ಪರಿಸರದಲ್ಲೂ ಹೆಣ್ಣು ಒಂಟಿಯಾಗಿ

ಜೀವಿಸುವುದು ಕಷ್ಟವಾಗಿದೆ. ಶಾಲೆಯಲ್ಲಿ ಗುರುಗಳೇ ವಿದ್ಯಾರ್ಥಿನಿಯನ್ನು ವ್ಯಭಿಚಾರಕ್ಕೆ ಬಳಸಿಕೊಳ್ಳುವುದು ಆಗಾಗ ಪತ್ರಿಕೆಯಲ್ಲಿ ಬರುತ್ತಲೇ ಇರುತ್ತದೆ. ಈ ಸುದ್ದಿಯನ್ನು ಓದಿದ ಯಾವ ತಂದೆ - ತಾಯಿ ತಾನೇ ನಿರ್ಭಯವಾಗಿ ಮಕ್ಕಳನ್ನು ಶಾಲೆಗೆ ಕಳುಹಿಸಿಯಾರು ? ಬಾಳದಾರಿದೀಪವಾಗಬೇಕಿದ್ದ ವಿದ್ಯಾಭ್ಯಾಸ ಬಾಳಿನ ದಾರಿಯನ್ನೇ ಮುಚ್ಚಿಬಿಡುವ ಅಂಧಕಾರದತ್ತ ಕರೆದೊಯ್ಯುವ ಮಟ್ಟಕ್ಕೆ ಮುಟ್ಟಿರುವುದು ತೀರಾ ಶೋಚನೀಯ ಸಂಗತಿ. ಅಲ್ಲದೆ, ಮಹಿಳಾ ಕಾಲೇಜು ಹಾಸ್ಟಲ್‌ಗಳು ಸಹ ಸಾಕಷ್ಟು ಸಂಖ್ಯೆಯಲ್ಲಿಲ್ಲದಿರುವುದೂ, ಇದ್ದರೂ ಸುರಕ್ಷಿತವಾಗಿಲ್ಲದಿರುವುದೂ ಇಂದಿನ ವಾಸ್ತವಾಂಶವಾಗಿದೆ.

ದೇಶದ ಪ್ರಗತಿಯ ಬಗ್ಗೆ ಕಾಳಜಿಯಿದ್ದರೆ ಹೆಣ್ಣಿಗೆ ಕಡ್ಡಾಯವಾಗಿ ಶಿಕ್ಷಣದ ವ್ಯವಸ್ಥೆಯಾಗಬೇಕು. ಯಾವುದೇ ಕಾರಣಕ್ಕೂ ಹೆಣ್ಣು ಮಕ್ಕಳು ತಮ್ಮ ವಿದ್ಯಾಭ್ಯಾಸದಿಂದ ವಂಚಿತರಾಗಬಾರದು. ಶುಲ್ಕರಹಿತ ಶಿಕ್ಷಣ, ಪುಸ್ತಕ, ಬಟ್ಟೆಗಳ ಜತೆಗೆ ಸುರಕ್ಷಿತ ವಾತಾವರಣವೂ ನಿರ್ಮಾಣವಾಗಬೇಕು. ಅತ್ಯಾಚಾರ, ಅನಾಚಾರ ವೆಸಗಿದ ವ್ಯಕ್ತಿಗೆ ಕಠಿಣಕರ ಶಿಕ್ಷೆಯಾಗಿ ಬೇರೆಯವರು ಇಂಥಹ ಕೆಲಸ ಮಾಡಲು ಹೆದರುವಂತಾಗಬೇಕು. ಬಡಕುಟುಂಬದ ಹೆಣ್ಣುಮಕ್ಕಳಿಗೆ ಉಚಿತ ಊಟ ವಸತಿಗಳೂ ನಿರಂತರ ಪ್ರೋತ್ಸಾಹವೂ ದೊರೆಯಬೇಕು. ಸಿರಿವಂತರಿಗಿದರ ಅವಶ್ಯಕತೆಯಿಲ್ಲ. ಶ್ರೀಮಂತರ ಮಕ್ಕಳು ಸಾಮಾನ್ಯವಾಗಿ ಮೋಜುಮಾಡಿ ಕಾಲಕಳೆಯುವುದೇ ಹೆಚ್ಚು! ನಿಜವಾದ ವಿದ್ಯಾರ್ಥಿಗಳೆಂದರೆ ಬಡ ಕುಟುಂಬದಿಂದ ಬಂದವರೇ. ಅವಕಾಶವಿಲ್ಲದೆ ಆ ಪ್ರತಿಭೆಗಳು ಕಮರದಂತೆ ವ್ಯವಸ್ಥೆಯಾಗಬೇಕು. ವ್ಯವಸ್ಥೆಯು ಕೇವಲ ಕಾಗದ ಪತ್ರಗಳ ಅಂಕಿ ಅಂಶಗಳ ರೂಪದಲ್ಲಿರದೇ ಕಾರ್ಯರೂಪಕ್ಕೆ ತರುವ ಸಹೃದಯತೆಯಿರಬೇಕು.

ಪ್ರಕೃತಿದತ್ತ ಋತುಚಕ್ರವೂ, ಬಸಿರುತನ, ಬಾಣಂತಿತನಗಳ ಜತೆಗೆ ನಿಸರ್ಗದತ್ತ ಕೋಮಲತೆಯೂ ಹೆಣ್ಣಿಗೆ ಬಂದ ಶಾಪವೆಂದೇ ಹೇಳಬಹುದು. ಇದಕ್ಕೆ ಹೊರತಾಗಿ ಬೆರಳೆಣಿಕೆಯಷ್ಟು ಮಂದಿಯಿದ್ದಾರು. ಆದರೆ ಇದರ ಸುಳಿಯೊಳಗೆ ಸಿಲುಕಿ ನಲುಗಿ ಹೋಗುವವರೇ ಹೆಚ್ಚು. ಉದಾಹರಣೆಗೆ ಒಂದು ಹೆಣ್ಣು ಯಾವನೋ ಕೇಡಿಯ ಬಲವಂತದಿಂದ ಅತ್ಯಾಚಾರಕ್ಕೊಳಗಾದಾಗ, ಆತನನ್ನು ಅಪರಾಧಿಸ್ಥಾನದಲ್ಲಿ ನಿಲ್ಲಿಸಲು ಯಾವ ಸಾಧನವೂ ದೊರೆಯದೆ, ಆತ ರಾಜಾರೋಷವಾಗಿ ತಿರುಗಾಡಿ ಮೆರೆದಾಡುವ ವ್ಯವಸ್ಥೆ ನಮ್ಮ ಸಮಾಜದಲ್ಲಿದೆ. ಆದರೆ ಅದೇ ಒಂದು ಹೆಣ್ಣು ತನ್ನದೇನು ತಪ್ಪಿಲ್ಲದಿದ್ದರೂ ತನ್ನ ಅಮೂಲ್ಯವಾದ ಶೀಲ (?) ಕಳೆದು ಕೊಂಡೆನೆಂದು ಕೊರಗಿ ಅದನ್ನು ಯಾರಲ್ಲೂ ಹೇಳಿಕೊಳ್ಳಲಾಗದ ಪರಿಸ್ಥಿತಿಯಿಂದ ಆತ್ಮಹತ್ಯೆಯನ್ನೇ ಮಾಡಿಕೊಳ್ಳಬಹುದು. ಅಪರಾಧಿಯು ರಾಜಾರೋಷವಾಗಿ ಸಮಾಜದಲ್ಲಿ ಸಭ್ಯ ನಾಗರೀಕನಂತೆ ಜೀವಿಸಬಲ್ಲ. ಆದರೆ ಆಕೆಗೆ ಸಾವೇ ಗತಿ....? ಇದು ನಿಲ್ಲಬೇಕು. ತನ್ನ ಮೇಲೆ ಅತ್ಯಾಚಾರ ಮಾಡಿದವನನ್ನು ಬೆರಳೆತ್ತಿ ತೋರಿಸುವ ದಾಷ್ಟಿಕತೆಯು ಹೆಣ್ಣಲ್ಲಿ ಮೂಡಿಸಿ, ಅಂತಹ ಹೆಣ್ಣಿಗೆ ಒತ್ತಾಸೆಯಾಗಿ ನಿಂತು ಕೀಳರಿಮೆಯಿಂದ, ಕೊಂಕು ದೃಷ್ಟಿಯಿಂದ ನೋಡದೆ ಆ ಅತ್ಯಾಚಾರಿಗೆ ಎಲ್ಲರೊಂದಾಗಿ ಶಿಕ್ಷೆ ನೀಡಿ ಬುದ್ಧಿ ಕಲಿಸಬೇಕು.

ತಪ್ಪಿಗೆ ತಕ್ಕ ಶಿಕ್ಷೆಯಾಗದಿದ್ದಾಗ ಅಪರಾಧಿಯು ವಿಜೃಂಭಿಸಿ ಯಾವ ಭೀತಿಯೂ ಇಲ್ಲದೆ ಅಪರಾಧಗಳು ಎಲ್ಲೆಡೆ ಹೆಚ್ಚುತ್ತಿರುವುದು ಇಂದಿನ ಸಮಾಜದ ದೋಷಕ್ಕೆ ಕೈಗನ್ನಡಿಯಾಗಿದೆ. ಹೆಣ್ಣು ಪ್ರಯಾಣಿಸುತ್ತಿರಲಿ, ಒಂಟಿಯಾಗಿ ಹೋಗುತ್ತಿರಲಿ, ಆಫೀಸಿನಲ್ಲಿರಲಿ, ಆಕೆಯ ಮೇಲೆ ನಡೆಯುವ ಈ ಅತ್ಯಾಚಾರಗಳು ನಿಲ್ಲಬೇಕು. ಸಂಬಂಧಪಟ್ಟ ಇಲಾಖೆಯವರನ್ನೇ ಕಾಯದೆ, ಎಲ್ಲರೂ, ಹೃದಯವಂತರೆಲ್ಲರೂ ಹೆಣ್ಣಿಗಾಗುವ ಅನ್ಯಾಯಗಳ ವಿರುದ್ಧ ದನಿಯೆತ್ತಿ ಅವುಗಳನ್ನು ತಡೆಗಟ್ಟುವಲ್ಲಿ ಸಹಕರಿಸಬೇಕು. ಈ ದೈಹಿಕ ಅಬಲತೆಯೊಡನೆ ಮತ್ತೊಂದು ಅಬಲತೆಯೂ ಹೆಣ್ಣಲ್ಲಿ ಹಾಸುಹೊಕ್ಕಾಗಿ ಹೆಣೆದುಕೊಂಡಿದೆ. ಅದೆಂದರೆ ಆರ್ಥಿಕ ಪರಾವಲಂಬನೆ. ಇದು ದಿನನಿತ್ಯದ ವಹಿವಾಟಿನಲ್ಲಿ ಪ್ರಮುಖ ಪಾತ್ರ ವಹಿಸುವಂತಹುದು. ಬಹುತೇಕ ಕುಟುಂಬಗಳಲ್ಲಿ ದುಡ್ಡು ಕಾಸಿನ ವ್ಯವಹಾರವೆಲ್ಲ ಗಂಡಸಿನದೇ... ಅದಕ್ಕೆ ಅವರು ಕೊಡುವ ಕಾರಣ ಹೆಂಗಸರಿಗೆ ಇದೆಲ್ಲ ತಿಳಿಯದು. ಏನು ತಿಳಿಯದು...? ತಿಳಿಸಿಕೊಟ್ಟರೆ ತಾನೇ ತಿಳಿಯುವುದು..? ಒಬ್ಬ ಶ್ರೀಮಂತ ಜಮೀನ್ದಾರಿಣಿಯ ವ್ಯಥೆಯ ಕತೆಯನ್ನು ನಾನು ಕಣ್ಣಾರೆ ನೋಡಿದ್ದೇನೆ. ಬಂದ ಫಸಲುಗಳ ಆದಾಯ ವೆಚ್ಚಗಳನ್ನಿಡದೆ ಆಕೆಯ ಗಂಡ - ಮಕ್ಕಳು ತಮ್ಮ ದುಂದುಗಾರಿಕೆಯಿಂದ, ಆಡಂಬರ ಜೀವನದ ಲೋಲುಪತೆಯಿಂದ ಆಯಾ ಕಾಲಕ್ಕೆ ಭೂಮಿಗೆ ಮಾಡುವ ಆರೈಕೆ ಮಾಡದೆ, ಫಸಲಿನ ಉತ್ಪತ್ತಿಯೂ ಕಡಿಮೆಯಾಗಿ ಕಂದಾಯ, ಬ್ಯಾಂಕಿನ ಸಾಲಗಳು ಕಾಲಕಾಲಕ್ಕೆ ಪಾವತಿಯಾಗದೇ ಆಕೆಯ ಅರಿವಿಗೆ ಬಾರದೆ ಹರಾಜಿನ ಹಂತ ಮುಟ್ಟಿತು. ಆಕೆಯ ಅಸಹಾಯಕತೆಯನ್ನು ದುರುಪಯೋಗಪಡಿಸಿಕೊಂಡು ಆಕೆಯದೇ ಆದ ಪಿತ್ರಾರ್ಜಿತ ಆಸ್ತಿಯ ಮೇಲೂ ಸಿಕ್ಕ ಸಿಕ್ಕಲ್ಲಿ ಸಾಲ ಪಡೆದು ತಿಂದುಂಡು ತೇಗಿದರು, ಇದೊಂದು ಹೆಣ್ಣಿನ ಅಸಹಾಯಕತೆಯ ಸಂಕೇತ, ಗಂಡ-ಮಗ ಹೇಳಿದರಲ್ಲಿ ರುಜು ಹಾಕುವಷ್ಟಕ್ಕೆ ಆಕೆಯನ್ನು ಸೀಮಿತಗೊಳಿಸಿ ಮಿಕ್ಕೆಲ್ಲ ವ್ಯವಹಾರಗಳೂ ಆಕೆಯ ಗಮನಕ್ಕೆ ಬಾರದಂತೆ ಮಾಡಿದ್ದು ಬಲು ಅನ್ಯಾಯ. ಅದೇ ಮತ್ತೊಬ್ಬ ವಿದ್ಯಾವಂತ - ಉದ್ಯೋಗಸ್ಥ ಮಹಿಳೆ ತನಗೆ ಬರುವ ಸಂಬಳವನ್ನೆಲ್ಲ ಪತಿಗಿತ್ತು ಕಾಸುಕಾಸಿಗೂ ಕೈಯ್ಯೊಡ್ಡುವ ಹೀನ ಸ್ಥಿತಿ ! ಇವರ ಆರ್ಥಿಕ ಮಟ್ಟ ಮೇಲ್ಮಟ್ಟದ್ದಾದರೂ ತಮ್ಮ ಸಂಪಾದನೆಯನ್ನು ತಮಗೆ ಬೇಕಾದಂತೆ ಖರ್ಚು ಮಾಡಲಾರದ ಅಸಹಾಯಕ ಸ್ಥಿತಿಯಲ್ಲಿರುವ ಅಬಲೆಯರು ! ಈ ಆರ್ಥಿಕ ಸ್ವಾವಲಂಬನೆ ಹೆಣ್ಣಿಗೆ ಹಸ್ತಾಂತರವಾಗಬೇಕು. ಇದು ಹಳ್ಳಿಯ ಹೆಣ್ಣಿಗೂ ಅನ್ವಯಿಸುತ್ತದೆ. ದನಗಳಿಗೆ ಆರೈಕೆ ಮಾಡಿ ಹಾಲು ಕರೆಯುವವಳು ಅವಳೇ ಆದರೂ ಹಾಲನ್ನು ಡೈರಿಗೆ ನೀಡಿ ಹಣಕಬಳಿಸುವ ಧೂರ್ತ ಆಕೆಯ ಪತಿ! ಇದು ನಿಂತು, ಹೆಣ್ಣು ಹಣದ ದೃಷ್ಟಿಯಲ್ಲೂ ಸಬಲಳಾಗಬೇಕು. ದುಂದು ಮಾಡಲು ಬಹುತೇಕ ಹೆಣ್ಣು ಮಕ್ಕಳು ಇಷ್ಟಪಡುವುದಿಲ್ಲ, ದುಶ್ಚಟಗಳೂ ಹೆಣ್ಣಿಗೆ ಕಡಿಮೆಯೇ..... ಸಿಗರೇಟು, ಶರಾಬು, ವೇಶ್ಯಾವಾಟಿಕೆಗಳೆಲ್ಲ ಪುರುಷರಿಗೆ ಮೀಸಲಾದವು. ಆಕೆಯಲ್ಲಿರುವ ಸದ್ಭಾವನೆ, ಸನ್ನಡತೆಗಳ ಪೋಷಣೆಗಾದರೂ ಆಕೆಗೆ ಆರ್ಥಿಕ ಸ್ವಾವಲಂಬನೆಬೇಕು. ಇವೆಲ್ಲ ಕಾನೂನು ಕಟ್ಟಲೆಗಳಿಗೆ ನಿಲುಕದ ಸೂಕ್ಷ್ಮ ವಿಚಾರಗಳು, ವಿಚಾರವಂತರು ಇದನ್ನೆಲ್ಲ ಕುರಿತು ಚಿಂತಿಸಿ ಹೆಣ್ಣಿನ ಸಮಸ್ಯೆಗಳಿಗೆ ಸ್ಪಂದಿಸಿದಾಗ ಮಾತ್ರ ಇವುಗಳಿಗೆಲ್ಲ ಮುಕ್ತಿ ದೊರಕುತ್ತದೆ.

ಇಂದಿನ ದಿನಗಳ ಮತ್ತೊಂದು ಪಿಡುಗೆಂದರೆ ಭ್ರೂಣಹತ್ಯೆ.... ಹೆಣ್ಣೆಂದು ತಿಳಿದು ಗರ್ಭಾವಸ್ಥೆಯಲ್ಲೇ ಭ್ರೂಣವನ್ನು ನಾಶಪಡಿಸುವ ರಾಕ್ಷಸೀ ಕೃತ್ಯ ಇಂದು ನಡೆಯುತ್ತಿದೆ. ಇದರಿಂದ ಸಮಾಜದಲ್ಲಿ ಹೆಣ್ಣಿನ ಸಂಖ್ಯೆ ಕ್ಷೀಣಿಸುತ್ತಾ ಕೆಲವೆಡೆ 85%ರಷ್ಟಿರುವುದು ಆತಂಕಕಾರಿ ವಿಷಯ. ಕೊಂಬೆಯ ಮೇಲೇ ಕುಳಿತು ರೆಂಬೆಯನ್ನು ಕಡಿಯುವ ಹುಂಬತನದ ಕೆಲಸವಿದು.... ಹೆಣ್ಣಾದರೆ ಮದುವೆ, ವರದಕ್ಷಿಣೆಯೆಂಬ ಸಮಸ್ಯೆಗಳನ್ನೆದುರಿಸಬೇಕಾಗುತ್ತದೆಂದು ಅಜ್ಞಾನಿಗಳು ಭ್ರೂಣ ಹತ್ಯೆಗೆ ಚಡಪಡಿಸಿದರೆ, ವಿದ್ಯಾವಂತರಾದ ವಿಜ್ಞಾನಿಗಳು ತಮ್ಮ ವಿದ್ಯೆಯನ್ನು ಹಣದಾಸೆಗಾಗಿ ಒತ್ತೆಯಿಟ್ಟು ಇಂಥಹ ಹೀನ ಕೃತ್ಯವನ್ನೆಸಗಿ ಸಮಾಜದ ಕಂಟಕರಾಗುತ್ತಾರೆ. ಈ ಕ್ರೂರ ಪದ್ಧತಿಯನ್ನು ಕೇವಲ ಕಾಟಾಚಾರಕ್ಕಾಗಿ ಖಂಡಿಸದೆ ಹೃತ್ಪೂರ್ವಕವಾಗಿ ಸ್ಪಂದಿಸಿ, ಮುಂದಾಗುವ ಅನಾಹುತವನ್ನು ತಡೆಯಬೇಕು, ಹೆಂಗಸರಲ್ಲಿ ತಿಳುವಳಿಕೆ ಮೂಡಿಸಬೇಕು. ಅವರು ವಿದ್ಯಾವಂತರಾಗಿ ಹೊರಗಿನ ಪ್ರಪಂಚದ ಆಗುಹೋಗುಗಳನ್ನು ತಿಳಿಯುವಂತಾಗಬೇಕು. ಒಡವೆ ವಸ್ತ್ರಗಳ ಮೋಹವನ್ನು ಕಡೆಗೊತ್ತಿ ಪುಸ್ತಕ ಪ್ರೇಮವನ್ನು ಬೆಳೆಸಿಕೊಳ್ಳಬೇಕು. ಒಬ್ಬರನ್ನು ಮತ್ತೊಬ್ಬರು ಮತ್ಸರದಿಂದ ಕಾಣದೆ, ಕೀಳರಿಮೆಯಿಂದ ನರಳದೆ ವೈಚಾರಿಕತೆಯ ವೈಶಾಲ್ಯತೆಯನ್ನು ಪಡೆಯಬೇಕು. ತನ್ನ ಬಿಡುವಿನ ಕಾಲವನ್ನು ಅಪವ್ಯಯಗೊಳಿಸದೆ ಓದುವುದರಲ್ಲಿ, ಬರೆಯುವುದರಲ್ಲಿ ತೊಡಗಿಸಿಕೊಳ್ಳಬೇಕು. ತಮ್ಮ ಪ್ರತಿಭೆಗಳನ್ನು ಹೊಮ್ಮಿಸಲು ಅವಕಾಶವನ್ನು ಕಲ್ಪಿಸಿಕೊಳ್ಳಬೇಕು. 'ಕೂಪಮಂಡೂಕ' ತನದಿಂದ ಹೊರಬಂದು ಕಡಲ ದರ್ಶನ ಪಡೆದು ವಿಚಾರ ಶೀಲರಾಗಿ ದೇಶದ ಸತ್ಪ್ರಜೆಗಳಾಗಲು ಸಾಧ್ಯ. ಮಹಿಳೆಯರು ಒಗ್ಗಟ್ಟಾಗಿ ಒಂದುಗೂಡಿದಾಗ ಮಾತ್ರ ಅವರ ಅಭಿವೃದ್ಧಿ ಸಾಧ್ಯ. ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿಗೊಂದು 'ಸ್ಥಿರ' ಸ್ಥಾನ ನಿರ್ಮಾಣವಾಗುವ ಅಗತ್ಯತೆ ಇಂದು ಎಂದಿಗಿಂತ ಹೆಚ್ಚಾಗಿದೆ.

●

**ಜೀವಿ ವಚನ**

## ಮಿತ್ರಾಯ ನಮಃ

1

ಊರೂರಿಗೆ ಒಂದು ಮನೆ ಇರಬೇಕು ಎನ್ನುತ್ತಾರೆ. ಆದರೆ ಅದು
ಈ ಕಾಲದಲ್ಲಿ ಸಾಧ್ಯವಾಗಲಿಕ್ಕಿಲ್ಲ; ಕಾಲ ಬದಲಾಗಿದೆ, ಎನ್ನಬೇಡಿ.
ಊರಿಗೊಂದು ಮಿತ್ರನ್ನ ಪಡೆಯಬಹುದಲ್ಲ? ಪ್ರಯತ್ನಿಸಿ ನೋಡಿ
ನೀವು ಉತ್ತಮರಾದರೆ, ಉತ್ತಮರು ನಿಮ್ಮನ್ನು ಅರಸಿ ಬರುತ್ತಾರೆ.

2

ಮಿತ್ರರಲ್ಲಿ ಎರಡು ವಿಧ, ಒಂದು ಬಗೆಯ ಮಿತ್ರರು ಸಮಯಸಾಧಕರು
ಹೊಗಳುಭಟ್ಟರು, ತಮ್ಮ ಬೇಳೆ ಬೇಯಿಸಿಕೊಂಡು ಲಾಭಪಡೆವವರು
ಇನ್ನೊಂದು ಬಗೆಯ ಮಿತ್ರರು, ಅಪ್ರಿಯ ಸತ್ಯ ನುಡಿದು
ಬುದ್ಧಿಹೇಳುವವರು
ನಿಮ್ಮ ತಪ್ಪುಗಳಿಗೆ ತಮ್ಮ ಹೃದಯದ ಕನ್ನಡಿ ಹಿಡಿದು
ದಾರಿತೋರುವವರು.

3

ಗೆಳೆಯ ಎಂಥವನಿರಬೇಕೆಂದರೆ, ಅವನು??ಆಪತ್ಬಾಂಧವನಾಗಿರಬೇಕು
ಗೆಲವುಸೋಲು, ಮಾನಾಪಮಾನ, ಲಾಭಹಾನಿಗಳಲ್ಲಿ ಜೊತೆಗಿರಬೇಕು
ಕಷ್ಟಕಾಲದಲ್ಲಿ ಸದಾ ನಿಮ್ಮನ್ನು ರಕ್ಷಿಸಬೇಕು, ಹಿತೈಷಿಯಾಗಿರಬೇಕು
ಅರ್ಜುನನ ಸಖನಂತೆ, ಅವನು ನಿಮ್ಮ ಜೀವನರಥವ ಓಡಿಸಿರಬೇಕು.

4

ನೀವು ಸುಖದಲ್ಲಿ ತಲ್ಲೀನರಾದಾಗ ದೂರದಿಂದ ನೋಡುತಿದ್ದರು ಕೂಡ
ಕಷ್ಟಕಾಲದಲ್ಲಿ ಧಾವಿಸಿ ನಿಮ್ಮೆಡೆಗೆ ಬರುವವನೆ ನಿಜಮಿತ್ರ, ಪರಮಮಿತ್ರ.
ನಿಮ್ಮ ಸುಖ ವರ್ಧಿಸುವ, ದುಃಖವನು ಅರ್ಧಿಸುವ ಮಿತ್ರನೆ ನಿಜಮಿತ್ರ
ಅಂಥ ಮಿತ್ರರನ್ನು ಸದಾ ನೆನೆಯಬೇಕು, ಎನ್ನಬೇಕು, 'ಮಿತ್ರಾಯನಮಃ'.



–ಡಾ। 'ಜೀವಿ' ಕುಲಕರ್ಣಿ

### ಮನೆಯಾಕೆ

ಮನೆ ಸ್ವಚ್ಛವಿದ್ದರೆ
"ಲಕ್ಷ್ಮೀ" ಮನೆಯಾಕೆ.
ಮನೆ ಅಸ್ವಚ್ಛವಿದ್ದರೆ
ಮನೆ - ಯಾಕೆ?!

### ಮಾತು

ಮಾತು ಕಡಲೆಯಾದರೆ
ಮೌನ..
ಸಾಗರದಾಳದ
ಕಪ್ಪೆ ಚಿಪ್ಪು!

*- ಶೋಭಾ ಪ್ರಮೋದ್*

**ಅಡುಗೆ ರುಚಿ**

## ಕುಂಬಳಕಾಯಿ ಹಲ್ವಾ

**ಅಗತ್ಯವಿರುವ ಸಾಮಾಗ್ರಿಗಳು:**



ಸಿಹಿಗುಂಬಳ ತುರಿದದ್ದು ಎರಡು ಕಪ್
ಹಾಲು ಒಂದು ಕಪ್
ಸಕ್ಕರೆ ಒಂದು ಕಪ್
ತುಪ್ಪ ಒಂದು ಕಪ್
ಒಣದ್ರಾಕ್ಷಿ ಸುಮಾರು ಹತ್ತು
ಏಲಕ್ಕಿ ಪುಡಿ ಕಾಲು ಟೀ ಚಮಚ (ಅಥವಾ ನಾಲ್ಕು ದೊಡ್ಡ ಗಾತ್ರದ ಏಲಕ್ಕಿಯನ್ನು ಪುಡಿಮಾಡಿ)
ಗೋಡಂಬಿ ಸುಮಾರು ಆರು (ಬಿಳಿಯದ್ದು) ಸಾಧ್ಯವಾದರೆ ಬಾದಾಮಿಯನ್ನು ಸೇರಿಸಬಹುದು.
ಕೇಸರಿ ಎರಡರಿಂದ ಮೂರು ಎಸಳು ಸಾಕು

**ವಿಧಾನ:**

1)ಸಿಹಿಗುಂಬಳದ ತುರಿಯನ್ನು ಕುಕ್ಕರ್‌ನಲ್ಲಿ ಕೊಂಚವೇ ನೀರಿನೊಡನೆ ಎರಡು ಸೀಟಿ ಬರುವವರೆಗೆ ಕುದಿಸಿ. ಬಳಿಕ ತಣಿಸಿ ಮುಚ್ಚಳ ತೆಗೆಯಿರಿ. ಸಿಹಿಗುಂಬಳವನ್ನು ಹೊರತೆಗೆದು ಒಂದು ತಟ್ಟೆಯ ನಡುವೆ ಹರಡಿ. ತಟ್ಟೆ ಕೊಂಚ ಓರೆಯಾಗಿಸಿದರೆ, ಉಳಿದಿದ್ದ ನೀರು ಹರಿದು ಹೋಗುತ್ತದೆ. ಈ ನೀರನ್ನು ನಿವಾರಿಸಿ ಕೊಂಚ ಒತ್ತಿ ಉಳಿದ ನೀರು ಸಹ ಹರಿದು ಹೋಗುವಂತೆ ಮಾಡಿ.

2)ಒಂದು ದಪ್ಪ ತಳದ ಬಾಣಲೆ ಅಥವಾ ಪಾತ್ರೆಯಲ್ಲಿ ಮಧ್ಯಮ ಉರಿಯಲ್ಲಿ ಎರಡು ದೊಡ್ಡ ಚಮಚ ತುಪ್ಪವನ್ನು ಕಾಯಿಸಿ. ತುಪ್ಪ ಬಿಸಿಯಾದ ಕೂಡಲೇ ಬೇಯಿಸಿದ ಸಿಹಿಕುಂಬಳದ ತುರಿಯನ್ನು ಹಾಕಿ.

3) ಕುಂಬಳ ಕಾಯಿ ಪೂರ್ಣ ಬೇಯುವವರೆಗೆ ತಿರುವುತ್ತಾ ಇರಿ. ಇದು ಹುರಿಯಲು ಸುಮಾರು ಐದು ನಿಮಿಷ ಬೇಕಾಗಬಹುದು. ಆದರೆ ನಡುನಡುವೆ ತಿರುವುತ್ತಾ ಇರಬೇಕು. ಇಲ್ಲದಿದ್ದರೆ ತಳ ಕಪ್ಪಾಗಿ ರುಚಿ ಹುಳಿಯಾಗುತ್ತದೆ.

4)ಈಗ ಹಾಲು ಹಾಕಿ ಕಲಕಿ ಬಳಿಕ ಸಕ್ಕರೆ, ಕೇಸರಿ ಹಾಕಿ ಕಲಕಿ. ಹಾಲನ್ನು ಕುಂಬಳದ ತುರಿ ಪೂರ್ಣವಾಗಿ ಹೀರಿಕೊಂಡ ಬಳಿಕ ಉರಿಯನ್ನು ಚಿಕ್ಕದಾಗಿಸಿ ಇನ್ನೂ ಎರಡು ಚಮಚ ತುಪ್ಪವನ್ನು ಹಾಕಿ ತಿರುವಿ.

5)ಈಗ ಏಲಕ್ಕಿ ಪುಡಿಯನ್ನು ಹಾಕಿ ತಿರುವಿ. ತುಪ್ಪ ಬಿಡುತ್ತಿದೆ ಅಂದೆನಿಸಿದಾಗ್ ಉರಿಯನ್ನು ಹಾರಿಸಿ ಪಾತ್ರೆಯನ್ನು ಕೆಳಗಿಳಿಸಿ.

6)ಇನ್ನೊಂದು ಚಿಕ್ಕ ಪಾತ್ರೆಯಲ್ಲಿ ಇನ್ನೆರಡು ದೊಡ್ಡ ಚಮಚ ತುಪ್ಪ ಬಿಸಿ ಮಾಡಿ ಗೋಡಂಬಿ, ದ್ರಾಕ್ಷಿ, ಬಾದಾಮಿಗಳನ್ನು ಹಾಕಿ ಕೆಂಪಗಾಗುವಷ್ಟು ಹುರಿಯಿರಿ.

7)ಹುರಿದ ಗೋಡಂಬಿ ದ್ರಾಕ್ಷಿಯನ್ನು ಕುಂಬಳ ತುರಿಗೆ ಹಾಕಿ ಮಿಶ್ರಣ ಮಾಡಿ. ಬಿಸಿ ಬಿಸಿಯಾಗಿರುವಾಗಲೇ ಸೇವಿಸಿ

# ಮೈಸೂರು ಅಸೋಸಿಯೇಷನ್‌ನಲ್ಲಿ ನವರಾತ್ರಿ ಉತ್ಸವ

ಮೈಸೂರು ಅಸೋಸಿಯೇಷನ್ ಮುಂಬೈ ನವರಾತ್ರಿ ಉತ್ಸವದ ಅಂಗವಾಗಿ ದಿನಾಂಕ 18.10.2015 ರಂದು ಅಸೋಸಿಯೇಷನ್‌ನಲ್ಲಿ ಶ್ರೀ ಶಾರದಾ ಪೂಜೆಯನ್ನು ಮತ್ತು ಕೋಲಾಟದ (ದಾಂಡಿಯಾ ರಾಸ್) ಕಾರ್ಯಕ್ರಮವನ್ನು ಸದಸ್ಯರಿಗಾಗಿ ಏರ್ಪಡಿಸಿತ್ತು. ಮೈಸೂರು ಅಸೋಸಿಯೇಷನ್‌ನ ಅಧ್ಯಕ್ಷೆ ಕೆ. ಕಮಲಾ ಅವರ ಮುಂದಾಳತ್ವದಲ್ಲಿ





ನಡೆದ ಈ ಕಾರ್ಯಕ್ರಮದಲ್ಲಿ ಪ್ರಥಮವಾಗಿ ಸಂಜೆ ಗಂಟೆ 4.00 ಕ್ಕೆ ಶ್ರೀ ಶೃಂಗೇರಿ ಶಾರದಾಮಾತೆಯ ಪೂಜೆಯನ್ನು ನೆರವೇರಿಸಿ ಪ್ರಸಾದ ವಿತರಣೆ ಮಾಡಲಾಯಿತು.

ತದನಂತರ ಚುಕ್ಕಿ ರಂಗೋಲಿ ಸ್ಪರ್ಧೆಯನ್ನು ನಡೆಸಲಾಯಿತು. ಸಂಜೆ 7.00ಕ್ಕೆ ದಾಂಡಿಯಾ ರಾಸ್ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ದಾಂಡಿಯಾ ರಾಸ್ ಕಾರ್ಯಕ್ರಮದಲ್ಲಿ ಹಳೆಯ ಹಾಗೂ ಹೊಸ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು.


ಕಾರ್ಯಕ್ರಮದ ಕೊನೆಯ ಅಂಗವಾಗಿ ಚುಕ್ಕಿ ರಂಗೋಲಿ ಸ್ಪರ್ಧೆಯ ವಿಜೇತರಿಗೆ ಬಹುಮಾನವನ್ನು ನೀಡಲಾಯಿತು.

ಕೊನೆಯಲ್ಲಿ ಪ್ರೀತಿ ಭೋಜನದ ವ್ಯವಸ್ಥೆಯನ್ನು ಮಾಡಲಾಗಿತ್ತು. ಈ ಎಲ್ಲಾ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಮೈಸೂರು ಅಸೋಸಿಯೇಷನ್‌ನ ಸದಸ್ಯೆ ಶ್ರೀಮತಿ ವೀಣಾ ಜೋಶಿ ಅವರು ಆಯೋಜಿಸಿದ್ದರು.

ಫೋಟೋ ಕೃಪೆ : ಎಚ್.ಆರ್.ಎಲ್. ವೆಂಕಟೇಶ್







Date of Publication : 10th of every month RNI No. 040015 / 83
Regd. No. MNE / 93 / 2015-17 Date of Posting:10/11th of every month
at Mumbai Patrika Channel Sorting Office G.P.O.

# ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ, ಬೆಂಗಳೂರು
# ಮೈಸೂರು ಅಸೋಸಿಯೇಷನ್, ಮುಂಬೈ

## ಸಂಗೀತ ನೃತ್ಯೋತ್ಸವ

## ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಸದಸ್ಯರಿಂದ ಸಂಗೀತ ನೃತ್ಯ ಕಾರ್ಯಕ್ರಮಗಳು

**2015 ನವೆಂಬರ್ 14 ಮತ್ತು 15**

ಸ್ಥಳ : ಮೈಸೂರು ಅಸೋಸಿಯೇಷನ್ ಸಭಾಂಗಣ, ಮಾಟುಂಗ (ಪೂರ್ವ), ಮುಂಬೈ – 400 019.
ದೂರವಾಣಿ : 022 – 2402 4647 / 2403 7065.

**ತಮಗೆಲ್ಲರಿಗೂ ಆತ್ಮೀಯ ಸ್ವಾಗತ**

**ಟಿ. ಜಿ. ನರಸಿಂಹಮೂರ್ತಿ**
ರಿಜಿಸ್ಟ್ರಾರ್
ಕ.ಸಂ.ನೃ.ಅಕಾಡೆಮಿ

**ಕೆ. ಕಮಲಾ**
ಅಧ್ಯಕ್ಷರು
ಮೈಸೂರು ಅಸೋಸಿಯೇಷನ್ ಮುಂಬೈ

**ದಿನಾಂಕ : 14.11.2015 ಸಂಜೆ 5.00 ಗಂಟೆಗೆ**

### ಉದ್ಘಾಟನಾ ಸಮಾರಂಭ

ಅಧ್ಯಕ್ಷತೆ : **ಶ್ರೀಮತಿ ಗಂಗಮ್ಮ ಕೇಶವಮೂರ್ತಿ** ಅಧ್ಯಕ್ಷರು, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ

### ಕಾರ್ಯಕ್ರಮಗಳ ವಿವರ

1. ನಾಡಗೀತೆ : **ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ**
2. ಸ್ವಾಗತ, ಪ್ರಾಸ್ತಾವಿಕ : **ಶ್ರೀ ಟಿ. ಜಿ. ನರಸಿಂಹಮೂರ್ತಿ,ರಿಜಿಸ್ಟ್ರಾರ್**
3. ಮುಖ್ಯ ಅತಿಥಿಗಳ ಪರವಾಗಿ : **ಅನಿಸಿಕೆ**
4. ಅಧ್ಯಕ್ಷ ಭಾಷಣ : **ಗಮಕ ವಾಚನ**
5. ಪ್ರಶಸ್ತಿ ಪ್ರದಾನ : ಮೈಸೂರು ಅಸೋಸಿಯೇಷನ್ ಕರ್ನಾಟಕ ಶಾಸ್ತ್ರೀಯ ಸಂಗೀತ ಹಾಗೂ ಸುಗಮ ಸಂಗೀತ ಸ್ಪರ್ಧೆಯ ವಿಜೇತರರಿಗೆ

### ಕಾರ್ಯಕ್ರಮಗಳು ಸಂಜೆ 6.00 ರಿಂದ 9.00ರ ವರೆಗೆ

| | | |
|---|---|---|
| 6.00 – 6.30 | ವಚನ ಗಾಯನ | : **ಶ್ರೀಮತಿ ಶಾರದಾ ವಡವಾಟ ಭರತ್** |
| 6.30 – 7.00 | ಜುಗಲ್ ಬಂದಿ | : **ಶ್ರೀ ಎಂ. ದ್ವಾರಕೀಶ್** – ವೀಣಾ ವಾದನ |
| | **ಶ್ರೀ ರಫೀಕ್ ಖಾನ್** – ಸಿತಾರ್ ವಾದನ | |
| 7.00 – 7.30 | ಸುಗಮ ಸಂಗೀತ | : **ಶ್ರೀ ಡೇವಿಡ್** |
| | **ಶ್ರೀಮತಿ ಶಶಿಕಲಾ ಕುಲಹಳ್ಳಿ** | |
| 7.30 – 8.00 | ಹಿಂದೂಸ್ತಾನಿ ಸಂಗೀತ | : **ಶ್ರೀ ಅನನ್ಯ ಭಾರ್ಗವ** |
| 8.00 – 8.20 | ಭಕ್ತಿ ಸಂಗೀತ | : **ಶ್ರೀ ವಾನರಾಸಿ ಬಾಲಕೃಷ್ಣ ಭಾಗವತರ್** |
| 8.20 – 8.50 | ಯುಗಳ ನೃತ್ಯ | : **ಶ್ರೀ ಅಶೋಕ ಕುಮಾರ್** |
| | **ಶ್ರೀಮತಿ ಹೇಮಾ ದಿನೇಶ್ ವಾಘಮೋಡೆ** | |

**ದಿನಾಂಕ: 15.11.2015 ಸಂಜೆ 5.30**

| | | |
|---|---|---|
| 5.30–6.30 | ಕನಕ ವೈಭವ ನೃತ್ಯ ರೂಪಕ | : **ಶ್ರೀಮತಿ ಮಾಲಿನಿ ರವಿಶಂಕರ್ ತಂಡ ,ಬೆಂಗಳೂರು** |
| 6.30–7.00 | ಹಾರ್ಮೋನಿಯಂ ಸೋಲೋ | : **ಶ್ರೀ ರಾಜೇಂದ್ರ ಸಿಂಗ್ ಪವಾರ್** |
| 7.00–7.30 | ಹಿಂದೂಸ್ತಾನಿ ಸಂಗೀತ | : **ಶ್ರೀ ರಾಜಪ್ರಭು ಧೋತ್ರೆ** |
| | | **ಶ್ರೀ ಬಸವರಾಜ ಜೆ ಭಂಟನೂರು** |

Edited, Printed & Published by Mrs. Girija Shastry, On behalf of the Mysore Association, Mumbai. Tel.: 2402 4647 • Fax : 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361 / 2266 5938